ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ (ರಿ)

# ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ

(ಅನುದಾನಿತ, ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಶಾಶ್ವತ ಸಂಯೋಜಿತ, ಎನ್.ಸಿ.ಟಿ.ಇ.ಯ ಮಾನ್ಯತೆ, ಯು.ಜಿ.ಸಿ ಅಧಿನಿಯಮ 2(f), ಸೆಕ್ಷನ್ 12(B) ಮಾನ್ಯತೆ ಪಡೆದಿದೆ ಹಾಗೂ ನ್ಯಾಕ್‌ನಿಂದ ಸಿ.ಜಿ.ಪಿ.ಎ 2.70 ಅಂಕಗಳೊಂದಿಗೆ "B" ಶ್ರೇಣಿ ಮಾನ್ಯತೆ ಹೊಂದಿದೆ)

ಶಿವಮೊಗ್ಗ ರಸ್ತೆ ಶಿಕಾರಿಪುರ–577 427 ಶಿವಮೊಗ್ಗ ಜಿಲ್ಲೆ

Phone : 08187 – 222383, 222067 E-Mail: kumadvathibed@gmail.com

# ಸಮಾಜ ವಿಜ್ಞಾನ ಸಂಘ –2020

## Social Science Club -2020




# ಲೇಖನಗಳ ಸಂಗ್ರಹ

**"ಇತಿಹಾಸ ತಿಳಿದವರು ಇತಿಹಾಸ ಸೃಷ್ಟಿಸಬಲ್ಲರು"**

# ಸಮಾಜ ವಿಜ್ಞಾನ ಸಂಘ

**ರಾಷ್ಟ್ರಪತಿಗಳು**



**ಡಾ. ಜಯಶ್ರೀ ವಿ. ರಕ್ಕಸಗಿ**
**ಪ್ರಾಚಾರ್ಯರು, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ**

**ಪ್ರಧಾನ ಮಂತ್ರಿಗಳು**



**ಶ್ರೀ ದೇವರಾಜ ವೈ**
**ಸಹಾಯಕ ಪ್ರಾಧ್ಯಾಪಕರು**
**ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ**

**ಉಪ ಪ್ರಧಾನ ಮಂತ್ರಿಗಳು**



**ಡಾ. ವಾಣಿನಾಯಕಿ ಡಿ.ಸಿ**
**ಸಹಾಯಕ ಪ್ರಾಧ್ಯಾಪಕರು**
**ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ**

## ಸಭಾ ಪತಿಗಳು





ಶಶಿಕುಮಾರ ಕೆ. ಸಿ.

ಪ್ರಶಿಕ್ಷಣಾರ್ಥಿ, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ

## ಮಂತ್ರಿ ಮಂಡಲ


ಬಿ.ಇಡಿ ಪ್ರಶಿಕ್ಷಣಾರ್ಥಿಗಳು, ನಾಲ್ಕನೇ ಸೆಮಿಸ್ಟರ್

ಚೈತ್ರ. ಬಿ. ಕೆ ಗಂಗಮ್ಮ. ಎಸ್.ಎಸ್ ಕಲಾಶ್ರೀ ಎಸ್.ಬಿ ಕನ್ನಿಕಾ ಕಾವೇರಿ ಬಿ

ಕಾವ್ಯ ವಿ ನಗ್ಮಾ ಖಾನಂ ಪವಿತ್ರಾ ಎ ಎಸ್ ಸಲ್ಮಾ ಬಾನು ಸಂಗೀತ

ಸೌಮ್ಯ ಬಿ ತಾಸೀನ್ ಎನ್.ಹೆಚ್

ಹನುಮಗೌಡ ಕಿರಣ್ ಕುಮಾರ್ ಕೃಷ್ಣಾ ನಾಯ್ಕ ವಿಜಯ್ ಕುಮಾರ್

## ಬಿ.ಇಡಿ ಪ್ರಶಿಕ್ಷಣಾರ್ಥಿಗಳು, ಎರಡನೇ ಸೆಮಿಸ್ಟರ್


ಅಕ್ಷತಾ ಎನ್.ಬಿ


ಅಶ್ವಿನಿ ಡಿ.ಎಸ್


ಮಾಲಾ ಎಂ


ಮೇಘನಾ ವಿ


ರಶ್ಮಿ ಎಂ


ಸಾಕಮ್ಮ ಎಂ.ಎಸ್


ಶೃತಿ ಡಿ. ಬಿ


ಶೃತಿ ಕೆ. ಪಿ


ಉಷಾ ಹೆಚ್


ಉಷಾ ಎನ್


ವಿದ್ಯಾಶ್ರೀ ಡಿ ಹೆಚ್


ಅರ್ಪಿತ ಟಿ ಕೆ

# ಪರಿವಿಡಿ


| ಕ್ರಮ ಸಂಖ್ಯೆ | ವಿಷಯಾಂಶ | ಪುಟ ಸಂಖ್ಯೆ |
|---|---|---|
| 1 | ದಾಸ ಶ್ರೇಷ್ಠರ ಚರಿತ್ರೆ ಸಾರುವ ಬಾಡ | 6–7 |
| 2 | ಮಹಿಳಾ ಶಿಕ್ಷಣದ ಪ್ರತಿಪಾದಕಿ ಸಾವಿತ್ರಿ ಬಾಯಿ ಫುಲೆ | 8–10 |
| 3 | ಸುಭಾಷರಿಗೊಂದು ಶುಭಾಶಯ | 11 |
| 4 | ನಿಷ್ಠಾ –NISHTHA | 12–13 |
| 5 | ಭಾರತೀಯ ಸೇನೆಗೆ 'ರಫೇಲ್' ಬಲ | 14–15 |
| 6 | "ಚಬಹರ ಬಂದರು"ಒಪ್ಪಂದ | 16–17 |
| 7 | ಓಝೋನ್ ಪದರದ ಸಂರಕ್ಷಣೆಯಲ್ಲಿ ಸಾರ್ವಜನಿಕರ ಪಾತ್ರ | 18–19 |
| 8 | ಸಾವಿತ್ರ ಬಾಯಿ ಪುಲೆ | 20 |
| 9 | ಹಂಪಿ | 21 |
| 10 | ಹಳೇಬೀಡು | 22 |
| 11 | ಕೆಳದಿಯ ಚೆನ್ನಮ್ಮ | 23 |
| 12 | ಶಿವಪ್ಪನಾಯಕ | 24 |
| 13 | ಭಗತ್ ಸಿಂಗ್ | 25 |
| 14 | ಬಾಲ ಗಂಗಾಧರ ತಿಲಕ | 26 |
| 15 | ಸ್ವಾತಂತ್ರ್ಯ ಚಳುವಳಿಗೆ ತಿಲಕರ ಕೊಡುಗೆ | 27–28 |
| 16 | One Nation One Voter ID | 29–30 |
| 17 | ಜ್ಞಾನಿ ಪರಮಹಂಸರು | 31–32 |
| 18 | Human Rights Day | 33 –34 |

## ದಾಸಶ್ರೇಷ್ಠರ ಚರಿತ್ರೆ ಸಾರುವ ಬಾಡ

ಭಕ್ತಿಪರರೂ, ಕವಿಯೂ ಆದ ಕನಕದಾಸರು 'ದಾಸರಲ್ಲಿ ಕವಿ, ಕವಿಗಳಲ್ಲಿ ದಾಸರೆಂಬ'ಕನಕದಾಸರು ಕನ್ನಡ ಹರಿದಾಸ ಪರಂಪರೆಯಲ್ಲಿ ದಿಟ್ಟ ಹೆಜ್ಜೆಯನ್ನು ಇಟ್ಟಿದ್ದಾರೆ. ಇವರು ಮೇಲ್ವರ್ಗದ ಪಂಕ್ತಿಗೆ ಸೀಮಿತವಾದ ಭಕ್ತಿ ಪರಂಪರೆಯಲ್ಲಿ ಪ್ರವೇಶಿಸುವುದು ಅಷ್ಟು ಸುಲಭದ ಮಾತಾಗಿರಲಿಲ್ಲ. ಆದರೂ, ಆ ಚಕ್ರವ್ಯೂಹವನ್ನು ಭೇದಿಸಿ ಒಳಹೊಕ್ಕು ತಮ್ಮತನವನ್ನು ಮೆರೆದಿದ್ದಾರೆ.

ಕನಕರ ಜನ್ಮಭೂಮಿಯಾದ ಬಾಡದಲ್ಲಿ ಅವರ ಜೀವಿತದ ಗತವೈಭವವನ್ನು ಮರುಸೃಷ್ಟಿಸಲಾಗಿದೆ. ಕನಕರ ವರ್ಣರಂಜಿತ ಜೀವನದ ನಾನಾ ಸಂಗತಿಗಳನ್ನು ಪ್ರತಿಬಿಂಬಿಸುವ ಕಲಾಮೂರ್ತಿಗಳು, ಅವರ ಹುಟ್ಟು, ವಿದ್ಯಾರ್ಥಿ ಜೀವನ, ಉಡುಪಿಯಲ್ಲಿ ಶ್ರೀಕೃಷ್ಣ ತಿರುಗಿನಿಂತಿದ್ದು, ಚಿನ್ನದ ಕೊಪ್ಪರಿಗೆಯು ಅವರಿಗೆ ಸಿಕ್ಕು ಕನಕದಾಸರಾಗಿದ್ದು, ಸಾಮರಸ್ಯ ಬೋಧನೆ. ಹೀಗೆ, ಅವರ ಜೀವನದ ಘಟನೆಗಳನ್ನು ಪ್ರತಿಬಿಂಬಿಸುವ ಪ್ರತಿಮೆಗಳೂ ಬಾಡದಲ್ಲಿ ಅನಾವರಣಗೊಂಡಿವೆ. ಪ್ರವಾಸಿಗರ ಹೊಟ್ಟೆ ತುಂಬಿಸಲು ಫುಡ್ ಕೋರ್ಟ್, ವಿಶ್ರಾಂತಿ ಗೃಹ, ದಣಿವಾರಿಸಲು ಸಣ್ಣ ಸಣ್ಣ ಮಂಟಪ ಕುಟೀರಗಳಿವೆ. ಉದ್ಯಾನ ಮಾತ್ರವಲ್ಲ, ಸಮಾರಂಭ, ವಿಚಾರಸಂಕಿರಣ, ಸಮಾವೇಶ, ಸಭೆ, ನೃತ್ಯ, ನಾಟಕ, ಸಂಗೀತ ಸೇರಿದಂತೆ ಕಲಾ ಕಾರ್ಯಕ್ರಮಗಳು, ವಿವಾಹ ಸಮಾರಂಭಗಳನ್ನು ನಡೆಸಲು 3 ಸಾವಿರ ಆಸೀನಗಳ 'ಕಲಾಭವನ' ವಿದೆ.

ಇಲ್ಲಿ ಉತ್ಖನನದ ವೇಳೆ ಆದಿಕೇಶವ (ರಂಗನಾಥ) ದೇವಸ್ಥಾನ ಇದ್ದ ಬಗ್ಗೆ ಕುರುಹುಗಳು ಲಭ್ಯವಾಗಿದ್ದವು. ಅರಮನೆಯ ಅವಶೇಷಗಳು ಪತ್ತೆಯಾದವು. ಬೆಳ್ಳಿ, ತಾಮ್ರದ ನಾಣ್ಯಗಳು, ಮಡಿಕೆ ಚೂರುಗಳು ದೊರೆತಿದ್ದು, ಇದು ಕನಕದಾಸರ ಅರಮನೆಯೆಂದು ಖಚಿತಪಡಿಸಿದ್ದರು' ಎನ್ನುತ್ತಾರೆ ಸಂಶೋಧಕ ಜಗನ್ನಾಥ ಗೇನಣ್ಣನವರು.

ಪ್ರಾಧಿಕಾರವು ಅವಶೇಷಗಳನ್ನು ಸಂರಕ್ಷಿಸಿ, ಬಾಡ ಗುಡ್ಡದ ಮೇಲೆ ವಿಜಯನಗರ ಶಿಲ್ಪಕಲಾ ಶೈಲಿಯಲ್ಲಿ ಸುಂದರ ಅರಮನೆಯನ್ನು ಪುನರ್ ನಿರ್ಮಿಸಿದೆ. ಸುತ್ತ ಕೆಂಪುಕಲ್ಲಿನ ಕೋಟೆ, ಒಳಾಂಗಣದಲ್ಲಿ ಕನಕರ ಕೀರ್ತನೆಗಳನ್ನು ಗ್ರಾನೈಟ್ ಶಿಲೆಯಲ್ಲಿ ಚಿತ್ರಿಸಲಾಗಿದೆ. ಅರಮನೆಯಲ್ಲಿರುವ ತೈಲವರ್ಣಗಳು ಹಾಗೂ ಉಬ್ಬುಶಿಲೆಗಳು ಕನಕದಾಸರು ಹಾಗೂ ಅವರ ಪೂರ್ವಿಕರ ಚರಿತ್ರೆಯನ್ನು ಮುಂದಿನ ಪೀಳಿಗೆಗೆ ತಿಳಿಸುತ್ತಿವೆ. ಇಲ್ಲಿನ ದರ್ಬಾರ್ ಹಾಲ್ ನೋಡುಗರಲ್ಲಿ ಅಚ್ಚರಿ ಮೂಡಿಸುತ್ತದೆ.

- **ತಿಮ್ಮಪ್ಪನಿಂದ 'ಕನಕನಾಯಕ'** :

ಬಂಕಾಪುರದ ದಂಡನಾಯಕ ಬೀರಪ್ಪ ಹಾಗೂ ಬಚ್ಚಮ್ಮ ದಂಪತಿ ಪುತ್ರನಾಗಿದ್ದ ತಿಮ್ಮಪ್ಪ (ಕನಕನ ಮೂಲ ಹೆಸರು), ತಂದೆಯ ಅಕಾಲಿಕ ಮರಣದ ನಂತರ ಸುತ್ತ 78 ಹಳ್ಳಿಯ ದಂಡನಾಯಕರಾದರು. ಶೌರ್ಯ, ಸಾಹಸ ಹಾಗೂ ಬುದ್ಧಿಮತ್ತೆಯಿಂದ ನಾಯಕರೂ ಆದರು. ಭೂಮಿ ಅಗಿಯುತ್ತಿರುವ ವೇಳೆ ಬಂಗಾರ (ಕನಕ) ದೊರೆತು, ಅದನ್ನೆಲ್ಲ ಸತ್ಕಾರ್ಯಗಳಿಗೆ ಬಳಸಿದ್ದರಿಂದ ಪ್ರಜೆಗಳ ಮನಸ್ಸಿನಲ್ಲಿ 'ಕನಕ ನಾಯಕ'ರಾಗಿ ಸ್ಥಾನ ಪಡೆದರು ಎಂಬ ಐತಿಹ್ಯವಿದೆ.

- **ಕಾಗಿನೆಲೆಯಲ್ಲೇ ದೇಹತ್ಯಾಗ** :

'ಶರಣರ ಸಾವು ಮರಣದಲ್ಲಿ ನೋಡಾ' ಎಂಬಂತೆ ಭಕ್ತಿಪಥದಲ್ಲಿ ಬದುಕಿದ್ದ ಕನಕರ ದೇಹವನ್ನು 'ಕನಕಕೆರೆ'ಯ ಪಕ್ಕದಲ್ಲಿ ಮಣ್ಣು ಮಾಡಲಾಗಿದೆ. ಆ ಜಾಗದ ಮೇಲೆ ವೃಂದಾವನವನ್ನು ಕಟ್ಟಲಾಗಿದೆ. 1982ರಲ್ಲಿ ಬೆಂಗಳೂರಿನ ಕಾಳಿದಾಸ ಗೆಳೆಯರ ಬಳಗದವರು ಇಲ್ಲಿ ಸಣ್ಣ ಗುಡಿ ಕಟ್ಟಿಸಿ, ಕನಕರ ಆಳೆತ್ತರದ ಮೂರ್ತಿಯನ್ನು ನಿಲ್ಲಿಸಿದ್ದಾರೆ. 2008ರಲ್ಲಿ ಪ್ರಾಧಿಕಾರವು ಇಲ್ಲಿ ದೊರೆತ ಅಸ್ಥಿಪಂಜರವನ್ನೊಳಗೊಂಡ ಗ್ರಾನೈಟ್ ಶಿಲೆಯಲ್ಲಿ ವಿಜಯನಗರ ಶೈಲಿ ಮಾದರಿಯಲ್ಲಿ ಸಮಾಧಿ ನಿರ್ಮಿಸಲಾಗಿದೆ.

ಕನಕದಾಸರ ಪೂರ್ವದ ಮತ್ತು ನಂತರದ ಭಕ್ತಿ ಪರಂಪರೆಯನ್ನು ಗಮನಿಸಿದರೆ, ಅದು ಸಾಂಪ್ರದಾಯಿಕ ನೆಲೆಯಲ್ಲಿಯೇ ಸಾಗಿರುವುದನ್ನು ಕಾಣಬಹುದು. ಆದರೆ, ಇವರು ಅದಕ್ಕೆ ವೈಚಾರಿಕ ಪ್ರಖರತೆಯ ನೆಲೆಯಲ್ಲಿ ಭಕ್ತಿಯನ್ನು ನೋಡಿದರು. ತನ್ನೇಲ್ಲಾ ಐಹಿಕ ಸುಖ–ಸಂಪತ್ತುಗಳನ್ನು ತ್ಯಾಗ ಮಾಡಿದರು. 'ಅನುದಿನದಲ್ಲಿ ಬರುವ ಸುಖ–ದುಃಖ ನಿನ್ನದಯ್ಯ' ಎಂದು ಭಗವಂತನಿಗೆ ಶರಣಾದರು.

ಇಂತಹ ಭಕ್ತಿಪರಂಪರೆಯ ಮಹಾನ್ ಪುರುಷರ ಬಗ್ಗೆ ತಿಳಿದುಕೊಂಡು, ಅವರ ಸಾಧನೆಯನ್ನು ಪ್ರತಿಬಿಂಬಿಸುವ ಸ್ಥಳಗಳಿಗೆ ವಿದ್ಯಾರ್ಥಿಗಳನ್ನು ಕ್ಷೇತ್ರ ಪ್ರವಾಸಕ್ಕಾಗಿ ಕರೆದುಕೊಂಡು ಹೋಗುವ ಪ್ರಯತ್ನವನ್ನು ಶಿಕ್ಷಕರು ಮಾಡಬಹುದಾಗಿದೆ.



**ಪವಿತ್ರ. ಎ.ಎಸ್**
ಬಿ.ಇಡಿ., ಪ್ರಶಿಕ್ಷಣಾರ್ಥಿ

## ಮಹಿಳಾ ಶಿಕ್ಷಣದ ಪ್ರತಿಪಾದಕಿ ಸಾವಿತ್ರಿ ಬಾಯಿ ಫುಲೆ

ಭಾರತದ ಇತಿಹಾಸದ ಪುಟಗಳಲ್ಲಿ ಮೊಟ್ಟ ಮೊದಲ ಶಿಕ್ಷಕಿ, ಆಧುನಿಕ ಶಿಕ್ಷಣದ ಮಾತೆಯಾಗಿ ಗುರುತಿಸಲ್ಪಟ್ಟವರು ಸಾವಿತ್ರಿಬಾಯಿ ಫುಲೆ. ಸಮಾಜಕ್ಕೆ ಉತ್ತಮ ಶಿಕ್ಷಕಿ, ಮುಖ್ಯೋಪಾಧ್ಯಾಯಿನಿ, ಮಹಿಳಾ ಹಕ್ಕುಗಳ ಹೋರಾಟಗಾರ್ತಿ, ಸಂಘಟಕಿ ಮಾತ್ರವಲ್ಲ ದೇಶದ ಮೊಟ್ಟ ಮೊದಲ ಮಹಿಳಾ ಶಿಕ್ಷಕಿಯಾಗಿ ಇತಿಹಾಸದ ಪುಟಗಳಲ್ಲಿ ದಾಖಲಾದವರು ಸಾವಿತ್ರಿಬಾಯಿ.

**ಜನನ ಮತ್ತು ಬಾಲ್ಯ :**

ಸಾವಿತ್ರಿಯವರು 03–01–1831 ರಂದು ಮಹಾರಾಷ್ಟ್ರ ರಾಜ್ಯದ ಸತಾರಾ ಜಿಲ್ಲೆಯ "ನಯಿಗಾಂವ" ಎಂಬ ಚಿಕ್ಕ ಗ್ರಾಮದ ಬಡಕುಟುಂಬವೊಂದರಲ್ಲಿ ಜನಿಸಿದರು. ತಂದೆ ನೇವಸೆ ಪಾಟೀಲರ ಮುದ್ದಿನ ಮಗಳಾಗಿ ಬೆಳೆದು 1840 ರಲ್ಲಿ, ತನ್ನ 9ನೆಯ ವಯಸ್ಸಿನಲ್ಲಿಯೇ 13 ವಯಸ್ಸಿನ ಜ್ಯೋತಿಬಾಫುಲೆಯವರೊಂದಿಗೆ ಮದುವೆಯಾದರು. ಜ್ಯೋತಿಭಾರವರ ಕುಟುಂಬಸ್ತರು ಹೂ ಕಟ್ಟಿ ಮಾರುವ ಕೆಲಸ ಮಾಡುತ್ತಿದ್ದರು. ಓದಿನಲ್ಲಿ ತುಂಬಾ ಸೂಕ್ಷ್ಮಗ್ರಾಹಿಯಾಗಿದ್ದ ಜ್ಯೋತಿಬಾರವರನ್ನು ಅವರ ತಂದೆ ಗೋವಿಂದರಾವ, ಶೂದ್ರರು ಅಕ್ಷರ ಕಲಿತರೆ ಮಹಾ ಪಾಪ ಬರುತ್ತದೆ ಎನ್ನುವ ಬ್ರಾಹ್ಮಣನೊಬ್ಬನ ಮಾತಿಗೆ ಕಿವಿಗೊಟ್ಟು ಶಾಲೆ ಬಿಡಿಸಿ ಹೂವಿನ ಕೆಲಸದಲ್ಲಿ ತೊಡಗಿಸಿದರು. ಜ್ಯೋತಿಬಾ ಹುಟ್ಟಿದ ಮೇಲೆ ಅವರ ತಾಯಿ ತೀರಿಕೊಂಡಿದ್ದರಿಂದ ಮಗುವಿನ ಲಾಲನೆ ಪಾಲನೆ ಪೋಷಣೆ ಮಾಡಿದ್ದು ಅವರ ಸೋದರ ಸಂಬಂಧಿ ಸೋದರತ್ತೆ ಸುಗುಣಾಬಾಯಿ ಕ್ರಿಶ್ಚಿಯನ್ ಮಿಷನರಿ ಶಾಲೆಯ ಮುಖ್ಯಸ್ಥರಾದ ಜಾನ್ ಎನ್ನುವವರ ಮನೆಯಲ್ಲಿ ಕೆಲಸ ಮಾಡುತ್ತಿದ್ದಳು. ಅಕ್ಷರದ ಅರಿವಿನ ಸೆಳೆತದಿಂದಾಗಿ ಅಸ್ಪಷ್ಟ ಇಂಗ್ಲಿಷ್ ಸಹ ಬರುತ್ತಿತ್ತು. ಈಕೆ ಜ್ಯೋತಿಬಾರವರನ್ನು ಪುನಃ ಶಾಲೆಗೆ ಸೇರಿಸುವಲ್ಲಿ ಯಶಸ್ವಿಯಾದರು. 1841 ರಲ್ಲಿ ಸಾವಿತ್ರಿಬಾಯಿಯವರಿಗೆ ಮನೆಯೇ ಮೊದಲ ಪಾಠಶಾಲೆಯಾಗಿತ್ತು. ಪತಿ ಜ್ಯೋತಿಬಾ ಅವರೇ ಅವರ ಮೊದಲ ಗುರುಗಳಾಗಿದ್ದರು. ಮಹಾನ್ ಕ್ರಾಂತಿಕಾರಿ, ಭಾರತೀಯ ಸ್ತ್ರೀ ಶಿಕ್ಷಣದ ಹರಿಕಾರ, ಸತ್ಯ ಶೋಧಕ ಸಮಾಜದ ಸ್ಥಾಪಕರಾದ ಜ್ಯೋತಿಭಾಫುಲೆ, ಶಿಕ್ಷಣವು ಮಹಿಳೆಯರ ಬದುಕಿನಲ್ಲಿ ಅಮೂಲಾಗ್ರ ಬದಲಾವಣೆಗಳನ್ನು ತರಬಲ್ಲದು ಎಂಬುವುದನ್ನು ಸಂಪೂರ್ಣವಾಗಿ ಗ್ರಹಿಸಿದ್ದರು.

**ಶಿಕ್ಷಕಿಯಾಗಿ**

ಸಾವಿತ್ರಿಬಾಯಿ ಫುಲೆಯವರು ಶ್ರೀ ಭಿಡೆಯವರ ಮನೆಯಲ್ಲಿ ಆರಂಭಗೊಂಡ ಕನ್ಯಾ ಶಾಲೆಯ ಪ್ರಧಾನ ಶಿಕ್ಷಕಿಯಾಗಿದ್ದರು. ಅದು ಹಿಂದೂ ಸ್ತ್ರೀಯೊಬ್ಬಳು ಶಿಕ್ಷಕಿಯಾಗುವುದು ಧರ್ಮ ಮತ್ತು ಸಮಾಜಕ್ಕೆ ದ್ರೋಹ ಬಗೆದಂತೆ ಎಂದು ತಿಳಿದುಕೊಂಡಿದ್ದ ಕಾಲ ಘಟ್ಟವಾಗಿತ್ತು. ಸಾವಿತ್ರಬಾಯಿ ಫುಲೆಯವರು ತಮ್ಮ ಮನೆಯಿಂದ ಪಾಠಶಾಲೆಗೆ ಹೊರಟಾಗ ಅನೇಕ ಜನರು ಕೇಕೆ ಹಾಕಿ ನಗುತ್ತಿದ್ದರು. ವ್ಯಂಗವಾಡುತ್ತಿದ್ದರು. ಅವರ ಮುಖ, ಮೈಮೇಲೆ ಸಗಣಿ, ಕೆಸರು ಬಿಸಾಡುವುದು, ಕಲ್ಲೆಸೆಯುವುದು, ಕೋಳಿ ಮೊಟ್ಟೆಗಳನ್ನು ಹೊಡೆಯುವುದು ಇತ್ಯಾದಿಗಳನ್ನು ಮಾಡುತ್ತಿದ್ದರು. ಇದರಿಂದ ದೃತಿಗೆಡದ ಸಾವಿತ್ರಿಬಾಯಿಯವರು ಯಾವಾಗಲೂ ಶಾಲೆಗೆ ಹೋಗುವಾಗ ತಮ್ಮ ಬ್ಯಾಗಿನಲ್ಲಿ ಹೆಚ್ಚುವರಿಯಾಗಿ ಸೀರೆಯೊಂದನ್ನು ಇಟ್ಟುಕೊಳ್ಳುತ್ತಿದ್ದರು. ಏಕೆಂದರೆ ಶಾಲೆ ತಲುಪಿ ತರಗತಿಗೆ ಹೋಗುವಾಗ ಕೊಳೆಯಾದ ಸೀರೆಯನ್ನು ಕಳಚಿ ಬ್ಯಾಗಿನಲ್ಲಿದ್ದ ಸೀರೆಯನ್ನು ಉಟ್ಟುಕೊಂಡು ಹೋಗುತ್ತಿದ್ದರು. ಇಂತಹ ಸಮಾಜದ ಮಧ್ಯದಲ್ಲಿಯೂ ಕಿಂಚಿತ್ತೂ ಧೃತಿಗೆಡದೆ 1848 ರಿಂದ 1852 ರವಧಿಯಲ್ಲಿ ಸುಮಾರು 18 ಪಾಠಶಾಲೆಗಳನ್ನು ಫುಲೆ ದಂಪತಿಗಳು ತೆರೆದರು. ಈ ಶಾಲೆಗಳ ಆಡಳಿತಾತ್ಮಕ ಜವಾಬ್ದಾರಿಯನ್ನು ಸಾವಿತ್ರಿಬಾಯಿ ಫುಲೆಯವರು ನಿರ್ವಹಿಸಬೇಕಾಗಿತ್ತು. ತಮ್ಮ ಜವಾಬ್ದಾರಿಗಳನ್ನು ಸಮರ್ಥವಾಗಿ ಮತ್ತು ಸಮರ್ಪಕವಾಗಿ

ನೆರವೇರಿಸುವ ಮೂಲಕ ಸಾವಿತ್ರಿಬಾಯಿಯವರು ಜ್ಯೋತಿಬಾಫುಲೆಯವರಿಗೆ ನೆರವಾದರು. ಅಂದಿನ ಆಂಗ್ಲ ಸರಕಾರವು ಈ ದಂಪತಿಗಳ ಕಾರ್ಯವೈಖರಿ, ಸಾಧನೆಗಳನ್ನು ಮೆಚ್ಚಿ ಸಾವಿತ್ರಿ ಬಾಯಿ ಫುಲೆಯವರಿಗೆ 'ಭಾರತದ ಮೊದಲ ಶಿಕ್ಷಕಿ' ಎಂಬ ಬಿರುದು ನೀಡಿತು. ಸ್ತ್ರೀಯರು ಕೂಡಾ ಪುರುಷರಂತೆ ಶಿಕ್ಷಣವನ್ನು ಪಡೆಯಬೇಕೆಂಬ ಮಹದಾಸೆಯಿಂದ ತಮಗೊದಗಿದ ಕಷ್ಟ – ಕಾರ್ಪಣ್ಯಗಳನ್ನು ಲೆಕ್ಕಿಸದೆ ಅವುಗಳನ್ನೆಲ್ಲವನ್ನು ಬದಿಗೊತ್ತಿ ಸ್ತ್ರೀ ಕುಲಕ್ಕೆ ಶೈಕ್ಷಣಿಕ ರಹದಾರಿಗಳನ್ನು ತೋರಿಸಿಕೊಟ್ಟು ಶಿಕ್ಷಣದ ಮಹಾಮಾತೆಯಾದರು ಸಾವಿತ್ರಿ.

**ಲೇಕಕಿಯಾಗಿ**

1854 ರಲ್ಲಿ ಸಾವಿತ್ರಿಬಾಯಿಯವರು ತಮ್ಮ ಕವನ ಸಂಕಲನವಾದ 'ಕಾವ್ಯ ಫುಲೆ' (ಕಾವ್ಯ ಅರಳಿದೆ) ಎನ್ನುವ ಕೃತಿಯನ್ನು ಪ್ರಕಟಿಸಿದರು. ಈ ಕೃತಿಯು 19ನೇ ಶತಮಾನದ ಸಮಾಜದ ಚಿತ್ರಣವನ್ನು ದಾಕಲಿಸುವಲ್ಲಿ ಮೈಲಿಗಲ್ಲಾಗಿದೆ. "ಅಭಂಗ" ಶೈಲಿಯ ಉತ್ತಮ ಕೃತಿಯೆಂದು ವಿಮರ್ಶಕರು ಅಭಿಪ್ರಾಯ ಪಟ್ಟಿದ್ದಾರೆ. ಈ ಕೃತಿಯಿಂದಾಗಿ ಅವರನ್ನು ವಿಮರ್ಶಕರು ಮರಾಠಿ ಕಾವ್ಯದ ಪ್ರವರ್ತಕಿ ಎಂದು ಹೊಗಳಿದ್ದಾರೆ. ಅವರ ಎರಡನೇ ಕೃತಿ "ಭವನಕಾರಿ ಸುಭೋದರತ್ನಾಕರ" (ಅಪ್ಪಟ ಮುತ್ತುಗಳ ಸಾಗರ) 1891 ರಲ್ಲಿ ಇದನ್ನು ಪ್ರಕಟಿಸಲಾಯಿತು. ಇದು ಜ್ಯೋತಿಭಾ ಅವರನ್ನು ಒಳಗೊಂಡ ಜೀವನಚರಿತ್ರೆಯಾಗಿದೆ. ಜ್ಯೋತಿಭಾ ಅವರ ಭಾಷಣಗಳ ಸಂಪಾದಿತ ಕೃತಿಯನ್ನು 1892 ರಲ್ಲಿ ಪ್ರಕಟಿಸಲಾಯಿತು. ನಾಲ್ಕನೇ ಕೃತಿಕರ್ಜೆ (ಸಾಲ) ಎಂಬುವುದಾಗಿದೆ. ಇದೊಂದು ಸಾಮಾಜಿಕ ಕಳಕಳಿಯುಳ್ಳ ಜನಸಾಮಾನ್ಯನ ಬದುಕಿಗೆ ಹತ್ತಿರವಾದ ಕೃತಿಯಾಗಿದೆ.

**ಸಾಮಾಜಿಕ ಬದಲಾವಣೆಯ ಹರಿಕಾರಳಾಗಿ :**

ಮಹಿಳೆಯರ ಹಕ್ಕುಗಳಿಗಾಗಿ ನಿರಂತರವಾಗಿ ಅವರನ್ನು ಸಂಘಟಿಸಿ ಹೋರಾಡುವುದರೊಂದಿಗೆ ಯಶಸ್ಸನ್ನು ಪಡೆಯುವುದು ಅವರ ಉದ್ದೇಶವಾಗಿತ್ತು. 1848 ರಲ್ಲಿ ಪತಿ ಜ್ಯೋತಿಭಾಫುಲೆಯವರೊಂದಿಗೆ ಸೇರಿ ಕೆಳ ಸಮುದಾಯದ ಹೆಣ್ಣು ಮಕ್ಕಳಿಗಾಗಿ ಪುಣೆ ನಗರದಲ್ಲಿ ಶಾಲೆಯನ್ನು ಪ್ರಾರಂಭಿಸಿದರು. 1855 ರಲ್ಲಿ ಕೃಷಿ ಕೂಲಿ ಕಾರ್ಮಿಕರಿಗಾಗಿ ರಾತ್ರಿ ಶಾಲೆಗಳನ್ನು ಪ್ರಾರಂಭಿಸಿದರು. ಜೊತೆಗೆ ಕೂಲಿಕಾರ್ಮಿಕರಲ್ಲಿ ತಿಳುವಳಿಕೆಯನ್ನು ತರಲು ಪ್ರಯತ್ನಿಸಿದರು.1868ರಲ್ಲಿ ದಲಿತರಿಗಾಗಿ ಮನೆಯ ಕುಡಿಯುವ ನೀರಿನ ತೊಟ್ಟಿಯನ್ನು (ಟ್ಯಾಂಕನ್ನು) ಬಿಟ್ಟುಕೊಟ್ಟರು. ಬ್ರಾಹ್ಮಣ ವಿಧವೆಯೊಬ್ಬರ ಮಗುವನ್ನು ದತ್ತು ತೆಗೆದುಕೊಂಡರಲ್ಲದೆ ವಿಧವಾ ವಿವಾಹಕ್ಕೆ ಪ್ರೋತ್ಸಾಹ ಮತ್ತು ಉತ್ತೇಜನವನ್ನು ನೀಡಿದರು. ಅಲ್ಲದೆ ಪಶ್ಚಿಮ ಮಹಾರಾಷ್ಟ್ರದ ಬರಗಾಲ ಪ್ರದೇಶಗಳಲ್ಲಿ ಎರೆಡು ವರ್ಷಗಳವರೆಗೆ ಸಲ್ಲಿಸಿದ ಸೇವೆಯು ಅವಿಸ್ಮರಣೀಯವಾದುದು. ಸಾವಿತ್ರಿಬಾಯಿಯವರದು ಸರಳ ಬದುಕು. ಅವರ ವೇಷ ಭೂಷಣಗಳು ಕೂಡಾ ಸರಳವಾಗಿದ್ದವು. ಸದಾ ಖಾದಿ ಸೀರೆಯನ್ನೇ ಧರಿಸುತ್ತಿದ್ದರು. ಅವರ ಚಿಂತನೆಗಳು ಉದಾತ್ತವಾಗಿದ್ದವು.

ಬ್ರಾಹ್ಮಣ ಸಮಾಜದಲ್ಲಿ ಅಂದು ಜಾರಿಯಲ್ಲಿದ್ದ ವಿಧವೆಯರ ತಲೆಬೋಳಿಸುವ ಪದ್ಧತಿಯನ್ನು ಪ್ರಬಲವಾಗಿ ವಿರೋಧಿಸಿದ್ದಲ್ಲದೆ ಅಂತಹ ಅನಿಷ್ಟ ಪದ್ಧತಿಗಳ ವಿರುದ್ಧ ಕಂಕಣಬದ್ಧರಾಗಿ ನಿಂತು ಹೋರಾಡಿ ಯಶಸ್ವಿಯಾದರು. ವಿಧವೆಯರಿಗೆ, ಗರ್ಭಿಣೀಯರಿಗೆ, ನೆರವಾಗುತ್ತಿದ್ದರು. ಬಾಲ್ಯವಿವಾಹವನ್ನು ಕಟುವಾಗಿ ಖಂಡಿಸಿದ್ದರು. ಅನಾಥ ಮಕ್ಕಳಿಗಾಗಿ ಶಿಶುಕೇಂದ್ರಗಳನ್ನು ಸ್ಥಾಪಿಸಿದರು. ಸತ್ಯಶೋಧಕ ಸಮಾಜದ ಅಧ್ಯಕ್ಷೆಯಾಗಿದ್ದರು. ಬ್ರಾಹ್ಮಣರ ಅಧಿಪತ್ಯಕ್ಕೆ ತಿಲಾಂಜಲಿಯನ್ನಿಟ್ಟರು. ಮೊಟ್ಟಮೊದಲ ಬಾರಿಗೆ ಕಾನೂನಿನ ನೆರವನ್ನು ಪಡೆದು ಮದುವೆ ಮಾಡಿಸಿದರು.

**ನಿಧನ :**

ಇಂತಹ ಕ್ರಾಂತಿಕಾರಿ, ದೂರದೃಷ್ಟಿಯುಳ್ಳ ಸಾವಿತ್ರಿಬಾಯಿ ಫುಲೆಯವರು 1897ರಲ್ಲಿ ಪ್ಲೇಗ್ ಪೀಡಿತ ರೋಗಿಗಳ ಸೇವೆಯಲ್ಲಿ ತೊಡಗಿದ್ದಾಗ ಸಾವಿತ್ರಿಯವರು ಕೂಡಾ ಆ ಸೊಂಕಿಗೆ ಬಲಿಯಾಗಿ ತೀರಿಕೊಂಡರು.

ಸಾವಿತ್ರಿಬಾಯಿಯವರ ಪರಿಶ್ರಮದ ಫಲವಾಗಿ ಮಹಿಳೆಯರಿದು ಶಿಕ್ಷಣ, ಉದ್ಯೋಗ, ಸೇವೆ ಇತ್ಯಾದಿ ವಲಯಗಲ್ಲಿ ತೊಡಗಿಸಿಕೊಂಡು ಉನ್ನತಸ್ಥಾನ, ಹುದ್ದೆ, ಇತ್ಯಾದಿಗಳನ್ನು ಹೊಂದಿ ತಮ್ಮದೇ ಆದ ಅಸ್ತಿತ್ವ, ಸ್ಥಾನಮಾನಗಳನ್ನು ಪಡೆಯುವಲ್ಲಿ ಯಶ ಸಾಧಿಸುತ್ತಿದ್ದಾರೆ



**ಶಶಿಕುಮಾರ್ ಕೆ.ಸಿ.**
ಬಿ.ಇಡಿ., ಪ್ರಶಿಕ್ಷಣಾರ್ಥಿ

## ಸುಭಾಷರಿಗೊಂದು ಶುಭಾಶಯ



ಸುಭಾಷ್‌ಚಂದ್ರ ಭೋಸರು 1897 ಜನವರಿ 23 ರಂದು ಒರಿಸ್ಸಾದ ಕಟಕ್‌ನಲ್ಲಿ ಭೋಸ್ ಕುಟುಂಬದಲ್ಲಿ ಜನಿಸಿದರು. ನಂತರ ಇಂಗ್ಲೆಂಡ್‌ಗೆ ಹೋಗಿ ಉನ್ನತ ವ್ಯಾಸಂಗವನ್ನು ಮುಗಿಸಿ ಭಾರತಕ್ಕೆ ಬಂದು ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಬ್ರಿಟಿಷರ ವಿರುದ್ಧ ಗಾಂಧೀಜಿ, ನೆಹರು ಅವರೊಂದಿಗೆ ರಾಜಕೀಯಕ್ಕೆ ಧುಮುಕಿದರು ಮತ್ತು ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ನಿರಂತರವಾದ ಹೋರಾಟವನ್ನು ಮಾಡಿದರು. 1945ರಲ್ಲಿ ಭಾರತದಲ್ಲಿ ಗಾಂಧೀಜಿಯವರ ನೇತೃತ್ವದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟವನ್ನು ಮುಂದುವರೆಸಿ ತಮ್ಮದೇ ಆದ ಐ.ಎನ್.ಎ ಭಾರತ ರಾಷ್ಟ್ರೀಯ ಸೇವೆಯನ್ನು ಸ್ಥಾಪಿಸಿದರು. ಸುಭಾಷ್ ಚಂದ್ರಭೋಸರ ಸಾಧನೆಗಳನ್ನು ಮತ್ತು ಹೋರಾಟವನ್ನು ಪರಿಗಣಿಸಿ, ಜನತೆ ಅಭಿಮಾನದಿಂದ ನೇತಾಜಿ ಎಂಬ ಬಿರುದನ್ನು ನೀಡಿದರು. ಅಂದಿನಿಂದ ಇವರು ನೇತಾಜಿ ಸುಭಾಷ್ ಚಂದ್ರಭೋಸ್ ಆಗಿ ಭಾರತದಲ್ಲಿ ಪ್ರಸಿದ್ದಿಯನ್ನು ಪಡೆದರು. ಸುಭಾಷ್ ಚಂದ್ರಬೋಸ್‌ರು ಭಾರತದಲ್ಲಿ ಅಸಹಕಾರ ಚಳುವಳಿ ಸೇರಿ ಗಾಂಧೀಜಿಯವರ ಅಹಿಂಸಾ ಪದ್ಧತಿಯಲ್ಲಿ ಅಚಲವಾದ ನಂಬಿಕೆಯನ್ನು ಇಟ್ಟಿದ್ದರು. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ನೇತಾಜಿಯವರ ಚಟುವಟಿಕೆಯನ್ನು ಗಮನಿಸಿದ ಅಂದಿನ ಬ್ರಿಟಿಷ್ ಸರ್ಕಾರ ಇವರನ್ನು ಕಲ್ಕತ್ತದಲ್ಲಿ ಗೃಹಬಂಧನದಲ್ಲಿರಿಸಿತು. ಆದರೆ ನೇತಾಜಿ ಬ್ರಿಟಿಷರಿಂದ ತಪ್ಪಿಸಿಕೊಂಡು ಆಫ್ಘಾನಿಸ್ತಾನ ಮತ್ತು ಜರ್ಮನಿಗೆ ಹೋಗಿ ಭಾರತದ ಸ್ವಾತಂತ್ರ್ಯಕ್ಕಾಗಿ ಅಂದಿನ ಸರ್ವಾಧಿಕಾರಿಗಳಾಗಿದ್ದ ಹಿಟ್ಲರ್ ಮತ್ತು ಮುಸ್ಸಲೋನಿಯವರ ಸಹಾಯವನ್ನು ಯಾಚಿಸಿದರು. ನಂತರ ಜರ್ಮನಿಯ ವಾಯುಪಡೆಯ ಮುಖಾಂತರ ನೇತಾಜಿ ಜಪಾನನ್ನು ತಲುಪಿದರು.

ಭಾರತೀಯ ರಾಷ್ಟ್ರೀಯ ಸೈನ್ಯವು 1943 ಮತ್ತು 1944ರಲ್ಲಿ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಭಾರತದ ತ್ರಿವರ್ಣ ಧ್ವಜವನ್ನು ಹಾರಿಸಿತು. ಹಾಗೂ ಇದು ಭಾರತದ ಉಪಖಂಡದಲ್ಲಿದ್ದ ಕೊಹಿಮಾ ಹಾಗೂ ಇಂಫಾಲ ಪ್ರದೇಶವನ್ನು ಆಕ್ರಮಿಸಿ, ನಂತರ ಮಣಿಪುರವನ್ನು ಕೂಡ ವಶಪಡಿಸಿಕೊಂಡಿತು. ಆದರೆ 1945 ರಲ್ಲಿ ಜಪಾನ್ ತನ್ನ ಬೆಂಬಲವನ್ನು ಹಿಂತೆಗೆದುಕೊಂಡಿದ್ದರಿಂದ ಸ್ವಲ್ಪ ಹಿನ್ನಡೆ ಹೊಂದಬೇಕಾಯಿತು. ಇದೇ ಸಂದರ್ಭದಲ್ಲಿ ನೇತಾಜಿಯವರು ಮುಂಚೂರಿಯಾ ಪ್ರದೇಶವನ್ನು ತಲುಪಿ ತಮ್ಮ ಮುಂದಿನ ಯೋಜನೆಯನ್ನು ರೂಪಿಸಿದರು, ಆದರೆ ದುರದೃಷ್ಟವಶಾತ್ 1945ರ ಆಗಸ್ಟ್‌ನಲ್ಲಿ ನಡೆದ ವಿಮಾನ ದುರಂತದಲ್ಲಿ ನೇತಾಜಿ ಮಡಿದರು. ಇದೇ ಸಂದರ್ಭದಲ್ಲಿ ಭಾರತ ರಾಷ್ಟ್ರೀಯ ಸೈನ್ಯದ ಸೈನಿಕರನ್ನು ಬ್ರಿಟಿಷ ಸರ್ಕಾರವು ಬಂಧಿಸಿ, ವಿಚಾರಣೆಗೆ ಒಳಪಡಿಸಿತು. ಆದರೆ ಬಾರತೀಯರ ಪ್ರತಿರೋಧ ಇದ್ದಿದ್ದರಿಂದ ಇವರೆಲ್ಲರಿಗೂ ಗಲ್ಲು ಶಿಕ್ಷೆ ತಪ್ಪಿತು.

ಈ ರೀತಿ ಸುಭಾಷ್ ಚಂದ್ರಭೋಸ್‌ರು ನಮ್ಮ ದೇಶ ಕಂಡ ಒಬ್ಬ ಮಹಾನ್ ದೇಶಪ್ರೇಮಿ ಎನಿಸಿದ್ದು ಇಂದಿಗೂ ಇವರ ಸಂಬಂಧಿಗಳು ಲಂಡನ್ ನಗರದಲ್ಲಿ ಇರುವರೆಂದು ಇತ್ತೀಚಿನ ವರದಿಗಳಿಂದ ತಿಳಿದುಬಂದಿದೆ. ಸುಭಾಷ್‌ಚಂದ್ರಭೋಸ್‌ರು ನಮ್ಮ ದೇಶವು ಕಂಡ ಒಬ್ಬ ಮಹಾನ್ ಹೋರಾಟಗಾರರಾಗಿದ್ದಾರೆ. ಈ ಸಂದರ್ಭದಲ್ಲಿ ನಮ್ಮ ನೇತಾಜಿಯವರ ಆದರ್ಶ ಗುಣಗಳನ್ನು ಸ್ಮರಿಸಿ, ಅವರ ನೆನಪನ್ನು ಉಳಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.



**ಸಂಗೀತ**

ಬಿ.ಇಡಿ ಪ್ರಶಿಕ್ಷಣಾರ್ಥಿ

# ನಿಷ್ಠಾ –NISHTHA

## ಶಾಲಾ ಮುಖ್ಯ ಮತ್ತು ಶಿಕ್ಷಕರ ಸಮಗ್ರ ಪ್ರಗತಿಗಾಗಿ ರಾಷ್ಟ್ರೀಯ ಉಪಕ್ರಮ

## (National Initiative for School Heads and Teachers Holistic Advancement:- NISHTHA)

ಪ್ರಪ್ರಥಮ ಬಾರಿಗೆ ಆನ್‌ಲೈನ್ ನಿಷ್ಠಾ ಕಾರ್ಯಕ್ರಮವನ್ನು ಆಂಧ್ರಪ್ರದೇಶದ 1200 ಪ್ರಮುಖ ಸಂಪನ್ಮೂಲ ವ್ಯಕ್ತಿಗಳಿಗಾಗಿ ಪ್ರಾರಂಭಿಸಲಾಯಿತು. ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ದೇಶಾದ್ಯಂತ ಈ "ಸಮಗ್ರ ಬೋಧನಾ ತರಬೇತಿ ಕಾರ್ಯಕ್ರಮ"ವು –"ಫಿಡೆಲಿಟಿ" ಅಥವಾ "ನಿಷ್ಠಾ"ಆಗಸ್ಟ್ 21 2019 ರಲ್ಲಿ ಪ್ರಾರಭವಾಯಿತು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು "ಸಮಗ್ರ ಶಿಕ್ಷಕರ ತರಬೇತಿ ಮೂಲಕ ಶಾಲಾ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಹಾಗೂ ಸಾಮರ್ಥ್ಯವನ್ನು ಹೆಚ್ಚಿಸುವ ಕಾರ್ಯಕ್ರಮವಾಗಿದೆ." ಈ ಕಾರ್ಯಕ್ರಮದಡಿ ದೇಶಾದ್ಯಂತ ಸುಮಾರು 42 ಲಕ್ಷ ಪ್ರಾಥಮಿಕ ಶಿಕ್ಷಕರು ಮತ್ತು ಕಾರ್ಯಕರ್ತರಿಗೆ (ರಾಜ್ಯ, ಜಿಲ್ಲೆ, ಬ್ಲಾಕ್, ಕ್ಲಸ್ಟರ್ ಮಟ್ಟ) ಕಲಿಕಾ ಗುಣಮಟ್ಟ, ಶಾಲಾ ಆಧಾರಿತ ಮೌಲ್ಯ ಮಾಪನ, ಕಲಿಕಾ ಕೇಂದ್ರೀತ ಬೊಧನೆ, ಶಿಕ್ಷಣದಲ್ಲಿ ಹೊಸ ಉಪಕ್ರಮಗಳು, ವಿವಿಧ ಶೈಕ್ಷಣಿಕ ಪದ್ದತಿಗಳು ಮುಂತಾದವುಗಳ ಮೂಲಕ ಮಕ್ಕಳ ಅಗತ್ಯತೆಗಳನ್ನು ಪೂರೈಸಲು ಸಮಗ್ರ ತರಬೇತಿ ನೀಡಲಾಗುತ್ತಿದೆ. ರಾಷ್ಟ್ರೀಯ ಮಟ್ಟದಲ್ಲಿ ರಾಷ್ಟ್ರೀಯ ಸಂಪನ್ಮೂಲ ವ್ಯಕ್ತಿಗಳ ಗುಂಪು, ರಾಜ್ಯ ಮಟ್ಟದಲ್ಲಿ ರಾಜ್ಯ ಸಂಪನ್ಮೂಲ ವ್ಯಕ್ತಿಗಳ ಗುಂಪು ರಚಿಸುವ ಮೂಲಕ ತರಬೇತಿ ನೀಡಲಾಗುತ್ತದೆ. ರಾಜ್ಯ ಸಂಪನ್ಮೂಲ ವ್ಯಕ್ತಿಗಳ ಒಕ್ಕೂಟವು ರಾಜ್ಯದ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರಿಗೆ ತರಬೇತಿ ನೀಡುತ್ತದೆ.

**'ನಿಷ್ಠಾ' ಲಕ್ಷಣಗಳು**

- ಈ ಮೆಗಾ ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮವನ್ನು ತಂತ್ರಜ್ಞಾನದೊಂದಿಗೆ ಸಂಯೋಜಿಸಲಾಗಿದೆ.
- ಈ ಕಾರ್ಯಕ್ರಮದ ಮೂಲ ಉದ್ದೇಶ ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಚಿಂತನೆಯನ್ನು ಬೆಳೆಸಲು ಶಿಕ್ಷಕರಿಗೆ ಪ್ರೇರೇಪಿಸುವುದು.
- ಶೈಕ್ಷಣಿಕ ಆಟಗಳು ಮತು ್ತ ರಸಪ್ರಶ್ನೆಗಳನ್ನು ಸಾಮಾಜಿಕ, ಭಾವನಾತ್ಮಕ ಕಲಿಕೆ ಕಲಿಸುವುದರ ಮೂಲಕ ಬೆಂಬಲ ನೀಡುವುದು.ಮೊದಲ ಹಂತದ ಕೌನ್ಸೆಲರ್‌ಗಳಾಗಿ ಎಲ್ಲಾ ಮುಖ್ಯಸ್ಥರು ಮತ್ತು ಶಿಕ್ಷಕರಿಗೆ ತರಬೇತಿ ನೀಡುವುದು.
- ಅನುಭವಾತ್ಮಕ ಮತ್ತು ಆನಂದದಾಯಕ ಕಲಿಕೆಯನ್ನು ಪ್ರೋತ್ಸಾಹಿಸುವುದು.
- ಕೇಂದ್ರ ಪ್ರಾಯೋಜಿತ ಯೋಜನೆ ಮತ್ತು ಉಪಕ್ರಮಗಳ ಅರಿವನ್ನು ಮೂಡಿಸುವುದು.
- ಆನ್‌ಲೈನ್ ಮೂಲಕ ಮೇಲ್ವಿಚಾರಣೆ ಮತ್ತು ಅದನ್ನು ಬೆಂಬಲಿಸುವುದು.
- ಶಾಲಾ ಆಧಾರಿತ ಮೌಲ್ಯಮಾಪನಕ್ಕೆ ಸಿದ್ಧತೆ ಮಾಡುವುದು.

**ನಿರೀಕ್ಷಿತ ಫಲಿತಾಂಶಗಳು**

- ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ ಮತ್ತು ನಾವಿನ್ಯತೆಗೆ ಕಾರಣವಾಗುವ ಕಲೆಯನ್ನು ಶಿಕ್ಷಕರು ಬೋಧಿಸುವರು.

- ಆರೋಗ್ಯಕರ ಮತ್ತು ಸುರಕ್ಷಿತ ಶಾಲಾ ವಾತಾವರಣದ ಸೃಷ್ಟಿ.
- ಕಲಿಕಾ ಸಾಮರ್ಥ್ಯಗಳ ಅಭಿವೃದ್ಧಿಗಾಗಿ ಕೇಂದ್ರೀಕರಿಸಿದ ಒತ್ತಡ ರಹಿತ ಶಾಲಾ ಆಧಾರಿತ ಮೌಲ್ಯಮಾಪನ ಅಭಿವೃದ್ಧಿಪಡಿಸುವುದು.
- ಶಿಕ್ಷಕರು ಚಟುವಟಿಕೆ ಆಧಾರಿತ ಕಲಿಕೆಯನ್ನು ಅಳವಡಿಸಿಕೊಳ್ಳುವುದು ಜೊತೆಗೆ ಶಾಲಾ ಮುಖ್ಯಸ್ಥರು ಶಾಲಾ ಶಿಕ್ಷಣದಲ್ಲಿ ಹೊಸ ಉಪಕ್ರಮಗಳ ಅರಿವು ಮೂಡಿಸುವರು.
- 'ಸಮಗ್ರತೆ' ಈ ಕಾರ್ಯಕ್ರಮದ ಪ್ರಮುಖ ನಿರೀಕ್ಷಿತ ಫಲಿತಾಂಶವಾಗಿದೆ.

**ವೈಶಿಷ್ಟ್ಯಗಳು**

- ವಿಷಯಕ್ಕೆ ಸಂಬಂಧಿಸಿದ ಸಾಧನಗಳು.
- ಪ್ರಸ್ತುತ ಚಟುವಟಿಕೆಗಳು.
- ವೆಬ್‌ಸೈಟ್ ಟ್ಯುಟೋರಿಯಲ್‌ಗಳು.
- ತರಬೇತಿ ವರದಿ.
- ಸಂಪನ್ಮೂಲಗಳು.
- ಮಾಧ್ಯಮ ಮುಖ್ಯಾಂಶಗಳು.
- ಗ್ಯಾಲರಿ–ವಿಡಿಯೊಗಳು ಮತ್ತು ಚಿತ್ರಗಳು.



**ಕಿರಣಕುಮಾರ**
ಬಿ.ಇಡಿ ಪ್ರಶಿಕ್ಷಣಾರ್ಥಿ

## ಭಾರತೀಯ ಸೇನೆಗೆ 'ರಫೇಲ್' ಬಲ

ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಿದ ಫ್ರಾನ್ಸ್ ನಿರ್ಮಿತ ರಫೇಲ್ ಯುದ್ಧ ವಿಮಾನದ ಮೊದಲ ಕಂತಿನ 5 ಯುದ್ಧ ವಿಮಾನಗಳು ಜುಲೈ 29,2020 ರಂದು ಹರಿಯಾಣದ 'ಅಂಬಾಲ ವಾಯುನೆಲೆ'ಗೆ ಬಂದು ಇಳಿದವು.ಇವು ಜಗತ್ತಿನ ಅತಿ ಶಕ್ತಿಶಾಲಿ ಯುದ್ಧ ವಿಮಾನಗಳಲ್ಲಿ ಒಂದಾಗಿದ್ದು ಒಪ್ಪಂದದ ಪ್ರಕಾರ 36 ಯುದ್ಧ ವಿಮಾನಗಳ ಪೈಕಿ ಮೊದಲ ಕಂತಿನ 5 ವಿಮಾನಗಳನ್ನು ಫ್ರಾನ್ಸ್ ಸರ್ಕಾರ ಭಾರತಕ್ಕೆ ಹಸ್ತಾಂತರಿಸಿದೆ.

- ಫ್ರಾನ್ಸ್‌ನ ಡಸಾಲ್ಟ್ ಏವಿಯೇಷನ್ ಕಂಪನಿ ನಿರ್ಮಾಣದ ಈ ಯುದ್ಧ ವಿಮಾನಗಳನ್ನು 59,000 ಕೋಟಿ ವೆಚ್ಚದಲ್ಲಿ ಖರೀದಿಸಲಾಗಿದ್ದು ಇನ್ನುಳಿದ 31 ವಿಮಾನಗಳನ್ನು 2022 ರೊಳಗಾಗಿ ಫ್ರಾನ್ಸ್ ಭಾರತಕ್ಕೆ ನೀಡಲಿದೆ.
- ಸು.7000 ಕಿ.ಮೀ ಕ್ರಮಿಸುವ ರಫೇಲ್ ಯುದ್ಧ ವಿಮಾನಗಳನ್ನು ಭಾರತೀಯ ವಾಯುಪಡೆಯ ಏರ್ ಚೀಫ್ ಮಾರ್ಷಲ್ ಆರ್ ಕೆ ಬದೌರಿಯಾ ಅವರು ಹರಿಯಾಣದ ವಾಯು ನೆಲೆಗೆ ಬರಮಾಡಿಕೊಂಡರು.

**ಒಪ್ಪಂದ:**

- ಭಾರತವು ಭಾರವಾದ ಮತ್ತು ಸರಳ ತೂಕದ ಯುದ್ಧ ವಿಮಾನಗಳನ್ನು ಹೊಂದಿದ್ದು, ಭಾರತದ ರಕ್ಷಣಾ ಉದ್ದೇಶದಿಂದ ಮಧ್ಯಮ ತೂಕದ ಫೈಟರ್ ಜೆಟ್ ತರಲು ರಕ್ಷಣಾ ಸಚಿವಾಲಯ ಪ್ರಯತ್ನಿಸುತ್ತಿತ್ತು, ಆ ಕಾರಣದಿಂದ ರಫೇಲ್ ಜೆಟ್‌ಗಳು ಭಾರತದ ಸೇನೆಗೆ ಸೇರ್ಪಡೆಯಾದವು.
- ಭಾರತ ಮತ್ತು ಫ್ರಾನ್ಸ್ ದೇಶಗಳು ಸೆಪ್ಟೆಂಬರ್ 23, 2016 ರಲ್ಲಿ 36 ರೆಪೇಲ್ ಯುದ್ಧ ವಿಮಾನಗಳ ವ್ಯವಹಾರ ಒಪ್ಪಂದಕ್ಕೆ ಸಹಿ ಹಾಕಿದ್ದವು.
- ಸು.7.8 ಮಿಲಿಯನ್ ಯುರೋ ವ್ಯವಹಾರಿಕ ಮೊತ್ತ ಇದಾಗಿದ್ದು ಅಂದಿನ ಕೇಂದ್ರ ರಕ್ಷಣಾ ಸಚಿವರಾಗಿದ್ದ ಮನೋಹರ ಪರಿಕರ್ ಮತ್ತು ಫ್ರಾನ್ಸ್‌ನ ರಕ್ಷಣಾ ಸಚಿವ ಜಿಯಾನ್ ವೈವೆಸ್ ಲೆಡ್ರಿಯನ್ ಅವರು ದೆಹಲಿಯಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಿದ್ದರು. ಫ್ರಾನ್ಸ್ ನ ಶೇಲ್ಡ್ ಡಸ್ಸಾಲ್ಟ್ ರಾಫೆಲ್ ಅವಳಿ ಎಂಜಿನ್ ಯುದ್ಧ ವಿಮಾನಗಳಿಗಾಗಿ ಅಂದಾಜು 58,000ದಿಂದ 59,000 ಕೋಟಿ ರೂ ವೆಚ್ಚ ಮಾಡಲಾಗಿದೆ.

**ರಾಫೇಲ್‌ನ ವಿಶೇಷತೆ** :

ಮಲ್ಟಿರೋಲ್ ಡಸ್ಸಾಲ್ಟ್ ವಿನ್ಯಾಸಗೊಳಿಸಿದ ಮತ್ತು ನಿರ್ಮಿಸಿದ ರಾಫೆಲ್‌ನ್ನು ಡಸ್ಸಾಲ್ಟ್ "ಓಮ್ನಿರೋಲ್"ವಿಮಾನ ಎಂದು ಸಹ ಕರೆಯುತ್ತಾರೆ RAFALE– ಇದು ಫ್ರೇಂಚ ಪದವಾಗಿದ್ದು ಇಂಗ್ಲೀಷ್‌ನಲ್ಲಿ ಇದನ್ನು 'Gust of Wind' ಎನ್ನುವರು.(ಗಾಳಿಯ ಸ್ಫೋಟ)

- ಫ್ರೆಂಚ್ ಅವಳಿ ಎಂಜಿನ್ ರಫೇಲ್ ಇದು ಕ್ವಿಕ್ ರಿಯಾಕ್ಷನ್ ಅಲರ್ಟ್, ವಾಯು ರಕ್ಷಣಾ, ವಾಯು ಸಾರ್ವಭೌಮತ್ವ ಕಾರ್ಯಾಚರಣೆಗಳು, ವಿದ್ಯುತ್ ಪ್ರಕ್ಷೇಪಣ ಮತ್ತು ಬಾಹ್ಯ ಕಾರ್ಯಗಳಿಗಾಗಿ ನಿಯೋಜನೆ, ಭೂ ಸೇನಾ ಪಡೆಗಳಿಗೆ ವಾಯು ಬೆಂಬಲ, ವಿಚಕ್ಷಣ ಕಾರ್ಯಾಚರಣೆ, ಪೈಲಟ್ ತರಬೇತಿ, ಮತ್ತು ಪರಮಾಣು ದಾಳಿ ತಡಗಟ್ಟುವಲ್ಲಿ ಪ್ರಮುಖ ಕಪಾತ್ರ ನಿರ್ವಹಿಸುತ್ತದೆ.

**ರಫೇಲ್ ಯುದ್ಧ ವಿಮಾನ:**

| | | |
|---|---|---|
| ದೇಶ | : | ಫ್ರಾನ್ಸ್ |
| ಸ್ಥಾಪಕ ಸಂಸ್ಥೆ | : | ಡಸ್ಸಾಲ್ಟ್ ಏವಿಯೇಷನ್ |
| ಅಭಿವೃದ್ಧಿ | : | ಮೇ 18 ,2001 |
| ವೇಗ | : | 1389 ಕಿ.ಮೀ.ಪ್ರತಿ ಗಂಟೆ |
| ಹಾರಾಟ ವ್ಯಾಪ್ತಿ | : | 3700 ಕಿ ಮೀ |
| ಎತ್ತರ | : | 5.30ಮೀಟರ್ |
| ಉದ್ದ | : | 15.3 ಮೀಟರ್ |
| ಎತ್ತರ ಹಾರಾಟ | : | 50,000 ಅಡಿ |
| ಗರಿಷ್ಠ ತೂಕ | : | 24500 ಕೆ.ಜಿ |
| ಇಂಧನ ಸಾಮರ್ಥ್ಯ | : | 4700 ಕೆ.ಜಿ. |
| ಸ್ಕ್ಯಾನಿಂಗ ಶ್ರೇಣಿ | : | 145 ಕಿ.ಮೀ |
| ಯುದ್ಧ ತ್ರಿಜ್ಯ | : | 1800 ಕಿ.ಮೀ. |

**ಅಂಬಾಲ:**

- ಅಂಬಾಲ ಹರಿಯಾಣದ ಒಂದು ಜಿಲ್ಲೆಯಾಗಿದೆ.
- 14 ನೇ ಶತಮಾನದಲ್ಲಿ ಅಂಬಾಲ ರಜಪೂತ ದೊರೆಗಳಿಂದ ಸ್ಥಾಪನೆಯಾಯಿತು.

**ಅಂಬಾಲ ವಾಯು ನೆಲೆ** :

- ಅಂಬಾಲ ವಾಯು ನೆಲೆಯು ಪಂಜಾಬ ಗಡಿಯಲ್ಲಿದ್ದು, ಸು.150 ರಿಂದ 400 ಕಿ.ಮೀ ಅಂತರದಲ್ಲಿ ಚೀನಾ ಹಾಗೂ ಪಾಕಿಸ್ತಾನ ಗಡಿಗೆ ಸಮೀಪವಿದೆ. ಆದ್ದರಿಂದ ರಫೇಲ್‌ನ ವಾಯು ನೆಲೆಯಾಗಿ ಅಂಬಾಲವನ್ನು ಆಯ್ಕೆ ಮಾಡಲಾಗಿದೆ.

| | | |
|---|---|---|
| ದೇಶ | : | ಭಾರತ |
| ಸ್ಥಳ | : | ಅಂಬಾಲ, ಹರಿಯಾಣ |
| ಮಾಲಿಕತ್ವ | : | ಇಂಡಿಯನ್ ಏರ್‌ಪೋರ್ಸ್ |
| ಆಪರೆಟರ್ | : | ವೆಸ್ಟರ್ನ್ ಏರ್‌ಕಮಾಂಡ್ ಉನ್ನತ ಭಾರತ |



**ಕೃಷ್ಣ ನಾಯ್ಕ ವಿ**
ಬಿ.ಇಡಿ ಪ್ರಶಿಕ್ಷಣಾರ್ಥಿ

## "ಚಬಹರ ಬಂದರು"ಒಪ್ಪಂದ

"ಚಬಹರ ಬಂದರು" ಒಪ್ಪಂದದಿಂದ ಭಾರತವನ್ನು ಕೈಬಿಟ್ಟ ಇರಾನ್ ಭಾರತ ಮತ್ತು ಇರಾನ್ ಮಧ್ಯ 2016 ರಲ್ಲಿ "ಚಬಹರ ಬಂದರು ಒಪ್ಪಂದ" ವಾಗಿದ್ದು, ಭಾರತದಿಂದ ನಿಗದಿತ ಸಮಯದಲ್ಲಿ ಹಣದ ಪೂರೈಕೆ ಹಾಗೂ ಯೋಜನೆಯ ಚಾಲನೆ ಬಗ್ಗೆ ಯಾವುದೇ ಸಹಕಾರ ದೊರೆಯದ ಕಾರಣ ಈ ಒಪ್ಪಂದದಿಂದ ಭಾರತವನ್ನು ಕೈ ಬಿಡುವ ನಿಲುವನ್ನು ಇರಾನ್ ಹೊಂದಿದೆ. ಭಾರತದ ನೆರವಿಲ್ಲದೆ ಚಬಹರ ಬಂದರಿನಿಂದ "ಜಹೇದಾನ್"ಗೆ ರೈಲು ಮಾರ್ಗವನ್ನು ನಿರ್ಮಿಸಲು ಮುಂದಾಗಿದೆ.

- ಭಾರತ –ಇರಾನ್ ಚಬಹರ ಬಂದರು ಒಪ್ಪಂದ2016 ರಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿಯವರ ಟೆಹ್ರಾನ್ ಭೇಟಿ ಸಂದರ್ಭದಲ್ಲಿ ಇರಾನ್ ಮತ್ತು ಭಾರತದ ಮಧ್ಯ ಚಬಹರ ಬಂದರು ಒಪ್ಪಂದಯಾಯಿತು.
- ಈ ಒಪ್ಪಂದದ ಪ್ರಕಾರ "ಅಫಘಾನಿಸ್ತಾನ್ ಮತ್ತು ಮಧ್ಯ ಏಷಿಯಾಕ್ಕೆ ಪರ್ಯಾಯ ಸಾರಿಗೆ ವ್ಯಾಪಾರ ಮಾರ್ಗ ನಿರ್ಮಿಸುವುದು ಹಾಗೂ ಚಬಹರ ಬಂದರಿನಿಂದ 628 ಕಿ.ಮೀ ರೈಲ್ವೆ ಹಳಿ ನಿರ್ಮಾಣ ಮಾಡುವುದು." ಈ ಉದ್ದೇಶದಿಂದ 2016 ಮೇ ಯಲ್ಲಿ ಭಾರತ, ಇರಾನ್ ಮತ್ತು ಅಫಘಾನಿಸ್ತಾನ ಮಧ್ಯ ತ್ರೀ ಪಕ್ಷೀಯ ಒಪ್ಪಂದಯಾಯಿತು. ತ್ರೀ ಪಕ್ಷೀಯ ಒಪ್ಪಂದವು ಈ ಕೆಳಗಿನ ರಾಷ್ಟ್ರಗಳ ಮುಖ್ಯಸ್ಥರ ಮಧ್ಯ ಏರ್ಪಟ್ಟಿತು. 'ತ್ರೀಪಕ್ಷೀಯ ಕೂಟ' ಭಾರತದ ಪ್ರಧಾನಿ– ನರೇಂದ್ರ ಮೋದಿ ಇರಾನ್ ಅಧ್ಯಕ್ಷ – ಹಸನ್ ರೂಹಾನಿ ಅಫಘಾನಿಸ್ತಾನ ಅಧ್ಯಕ್ಷ ಅಶ್ರಫ್ ಘನಿ ಇಂಡಿಯನ್ ರೈಲ್ವೆ ಕನ್ಸ್ಟ್ರಕ್ಷನ್ ಲಿಮಿಟೆಡ್ (IRCON) ರೈಲ್ವೆ ಮಾರ್ಗ ಯೋಜನೆಗೆ ಸುಮಾರು 400 ಮಿಲಿಯನ್ ಮೌಲ್ಯದ ಉಕ್ಕನ್ನು ಪೂರೈಸಲು ಮುಂದಾಗಿತ್ತು ಹಾಗೂ 1.6 ಬಿಲಿಯನ್ ಮೌಲ್ಯದ ಹಣಕಾಸು ಹೂಡಿಕೆ ಮಾಡುವ ಯೋಚನೆಯಲ್ಲಿತ್ತು,ಜೊತೆಗೆ 2016 ಜುಲೈನಲ್ಲಿ 150 ಮಿಲಿಯನ್ ಯುಎಸ್‌ಡಾಲರ್ ಮೌಲ್ಯದ ರೈಲು ಹಳಿಗಳನ್ನು ಸಾಗಿಸಲು ಮುಂದಾಗಿತ್ತು. ಆದರೆ ಅಮೆರಿಕಾವು ಇರಾನ್ ಮೇಲೆ ನಿರ್ಬಂಧವನ್ನು ವಿಧಿಸಿದ ಕಾರಣ ಭಾರತ ಈ ಯೋಜನೆಯ ಕಾರ್ಯವನ್ನು ಸ್ಥಗಿತಗೊಳಿಸಿತು. ಇರಾನ್ – ಚೀನಾ ಒಪ್ಪಂದವೇನು (ಅಧಿಕಾರಿ ಮೂಲಗಳ ವರದಿ ಪ್ರಕಾರ)– ಇರಾನ್‌ವು ಚೀನಾದೊಂದಿಗೆ 25 ವರ್ಷಗಳ ಅವಧಿಯ ಆರ್ಥಿಕ ಮತು_ ಭದ್ರತೆಯ ಸಹಭಾಗಿತ್ವದಲ್ಲಿ 400 ಬಿಲಿಯನ್ ಮೌಲ್ಯದ ಒಪ್ಪಂದಕ್ಕೆ ಸಹಿ ಹಾಕಿದೆ.ಆದ್ದರಿಂದ ಚಬಹರ್ ಯೋಜನೆಯಿಂದ ಭಾರತವನ್ನು ಇರಾನ್ ಕೈ ಬಿಟ್ಟಿದೆ.

**ಚೀನಾಕ್ಕೆ ಆಗುವ ಲಾಭಗಳು**

- ಬ್ಯಾಂಕಿಂಗ್, ದೂರಸಂಪರ್ಕ ,ಬಂದರು ,ರೈಲ್ವೆ, ಹಾಗೂ ಇರಾನ್‌ನ ವಿವಿಧ ಕ್ಷೇತ್ರದಲ್ಲಿ ಚೀನಾದ ಪಾಲುದಾರಿಕೆ.
- ಇರಾನ್‌ನಿಂದ ಚೀನಾಗೆ ಭಾರಿ ಪ್ರಮಾಣದಲ್ಲಿ ತೈಲ ಪೂರೈಕೆ ಸಾಧ್ಯತೆ.
- ಚೀನಾ ಮಿಲಿಟರಿ ನೆಲೆಗೆ ಇರಾನ್‌ದಿಂದ ಸಹಾಯ ಮತ್ತು ಸಹಕಾರ. ಭಾರತಕ್ಕೆ ಚಬಹರ ಬಂದರಿನ ಅವಶ್ಯಕತೆ.
- ಈ ಬಂದರಿನ ಮೂಲಕ ಭಾರತವು ಅಫಘಾನಿಸಾ_ನದ ಜೊತೆಗೆ ರಾಜಕೀಯ ಸುಸ್ಥಿರ ಸಂಪರ್ಕ ಹೊಂದಲು ಹಾಗೂ ಮಾನವೀಯ ಕಾರ್ಯಾಚರಣೆಯನ್ನು ಸಮನ್ವಯಗೊಳಿಸುವುದು. ಭಾರತವು "ರಷ್ಯಾ , ಯೂರೋಪಿಯನ್ ,ಮಧ್ಯ

ಏಷಿಯಾಗಳ ನಡುವೆ ರೈಲು, ಮತ್ತು ರಸ್ತೆ ಮಾರ್ಗಗಳನ್ನು ಹೊಂದಿದ ಅಂತರಾಷ್ಟ್ರೀಯ ಉತ್ತರ–ದಕ್ಷಿಣ ಸಾರಿಗೆ ಕಾರಿಡಾರ್ ನ ಪ್ರಮುಖ ಹೆಬ್ಬಾಗಿಲಾದ ಇರಾನ್" ಗೆ ಪ್ರವೇಶ ಮಾಡಬಹುದು.

ಈ ಬಂದರಿನ ಸಹಾಯದಿಂದ ಭಾರತೀಯ ನಿರ್ಮಾಣವಾದ "ಜರಂಜೆ ಡೆಲ್ರಾಮ್" ಹೆದ್ದಾರಿ ಮೂಲಕ ಮಧ್ಯ ಏಷಿಯಾ ಮತ್ತು ರಷ್ಯಾದೊಂದಿಗೆ ಸಾರಿಗೆ ಸಂಪರ್ಕ ಸಾಧಿಸಬಹುದು. ಹಾಗೂ ಈ ಮೂಲಕ ವಾಣಿಜ್ಯ ಹಾಗೂ ಆರ್ಥಿಕ ಚಟುವಟಿಕೆ ನಡೆಸಬಹುದು.

ಅಫಘಾನಿಸ್ತಾನದೊಂದಿಗೆ ಸರಕು ಸಾಗಾಣಿಗೆ ಪಾಕಿಸ್ಥಾನದಿಂದ ಬೈಪಾಸ್ ಮಾಡಬಹುದು, ಇರಾನ್ ಭಾರತಕ್ಕೆ ಮಿಲಿಟರಿ ಸೇನಾ ಮಿತ್ರನಾಗುತ್ತದೆ.

ಈ ಬಂದರಿನ ಮೂಲಕ ಕಬ್ಬಿಣದ ಅದಿರು, ಸಕ್ಕರೆ, ಮತ್ತು ಅಕ್ಕಿಯನ್ನು ಹಾಗೂ ಕಡಿಮೆ ವೆಚ್ಚದಲ್ಲಿ ತೈಲ ಆಮದನ್ನು ಮಾಡಿಕೊಳ್ಳಬಹದು.

ಮುಖ್ಯವಾಗಿ ಅರೇಬಿಯನ್ ಸಮುದ್ರದಲ್ಲಿ ಚೀನಾದ ಉಪಸ್ಥಿತಿಯನ್ನು ಎದುರಿಸಲು ಚಬಹರ ಬಂದರು ಭಾರತಕ್ಕೆ ಸಹಕಾರಿಯಾಗಲಿದೆ.

'ಚಬಹರ ಬಂದರು': ಆಗ್ನೇಯ ಇರಾನ್‌ನ ಸಿಸ್ತಾನ್ ಮತ್ತು ಬಲೂಚಿಸ್ತಾನ ಪ್ರಾಂತದ ಮಕ್ರಾನ್ ಕರಾವಳಿಯ ಓಮನ್ ಕೊಲ್ಲಿಯ 'ಚಬಹಾರ' ಪ್ರದೇಶದ ಒಂದು ಬಂದರು.

ಶಾಹಿದ್ ಕಲಾಂತರಿ' ಹಾಗೂ 'ಶಾಹಿದ್ ಬೆಹೆಶ್ತಿ' ಎಂಬ ಎರಡು ಪ್ರತ್ಯೇಕ ಬಂದರನ್ನು ಒಳಗೊಂಡಿದೆ.

ಈ ಬಂದರಿಗೆ "ಗೋಲ್ಡನ್ ಗೇಟ್" ಎಂದು ಕರೆಯುತ್ತಾರೆ. ಕಾರಣ ಅಫಘಾನಿಸ್ತಾನ್,ಮಧ್ಯ ಏಷಿಯಾ, ತುರ್ಕಮೆನಿಸ್ತಾನ್,ಉಜ್ಬೇಕಿಸ್ತಾನ್ ದೇಶಗಳಿಗೆ ಇದು ಹತ್ತಿರದಲ್ಲಿದೆ. ಸ್ಥಾಪನೆ: 1983 ಒಡೆತನ : ಬಂದರು ಮತ್ತು ಕಡಲ ಸಂಸ್ಥೆ ಮಹಾನಿರ್ದೇಶಕರು : ಬೆಹ್ರೌಜ್ ಅಘಾಯಿ.



**ಹನುಮಗೌಡ**
ಬಿ.ಇಡಿ., ಪ್ರಶಿಕ್ಷಣಾರ್ಥಿ

## “ಓಝೋನ್ ಪದರದ ಸಂರಕ್ಷಣೆಯಲ್ಲಿ ಸಾರ್ವಜನಿಕರ ಪಾತ್ರ”

ಓಝೋನ್ ಪದರ ಸೂರ್ಯನಿಂದ ಹೊರಸೂಸುವ ನೇರಳಾತೀತ ವಿಕಿರಣಗಳನ್ನು ಹೀರಿಕೊಳ್ಳುವ ಭೂಮಿಯ ವಾಯುಮಂಡಲದಲ್ಲಿ ಓಝೋನ್ N3 ನ ಅನಿಲದ ಅಧಿಕ ಸಾಂದ್ರತೆಯನ್ನು ಹೊಂದಿದೆ. ಭೂಮಿಯ ಮೇಲೆ ಸುಮಾರು 10ಕಿ.ಮಿ ನಿಂದ 40ಕಿ.ಮೀವರೆಗೆ ವ್ಯಾಪಿಸಲ್ಪಟ್ಟಿರುವ ಈ ಪ್ರದೇಶವು ಸೂರ್ಯನಿಂದ ಬಿಡುಗಡೆಯಾಗುವ ನೇರಳಾತೀತಾವಿಕಿರಣಗಳನ್ನು ಹೀರಿಕೊಂಡು ಭೂಮಿಗೆ ಅವುಗಳು ತಲುಪುವುದನ್ನು ತಡೆಗಟ್ಟುತ್ತವೆ. ಓಝೋನ್ ಪದರ ಹಾಗೂ ಅದಕ್ಕೆ ಆಗಿರುವ ಅನಾಹುತದ ಬಗ್ಗೆ ಜನರಲ್ಲಿ ಅರಿವಿಲ್ಲ. ಕೈಗಾರಿಕೋದ್ಯಮ ಕಾರ್ಖಾನೆಗಳು ಹೆಚ್ಚುತ್ತಲೇ ಇವೆ ಮತ್ತೊಂದೆಡೆ ಗೃಹಪಯೋಗಿ ದಿನಬಳಕೆ ವಸ್ತುಗಳಲ್ಲಿ ಬಿಡುಗಡೆಯಾಗುವ ರಾಸಾಯನಿಕಗಳು, ರೆಫ್ರೀಜರೆಟರ್ ಮತ್ತು ಏರ್ ಕಂಡೀಶನರ್‌ಗಳ ಉಪಯೋಗದಿಂದ ಬಿಡುಗಡೆಯಾಗುವ ಕ್ಲೋರೋ ಫ್ಲೋರೋ ಕಾರ್ಬನ್ ಅನಿಲ ಓಝೋನ್ ಪದರಕ್ಕೆ ರಂಧ್ರವುಂಟು ಮಾಡುತ್ತಿದೆ. ಭೂಮಿಯ ಓಝೋನ್ ಪದರವು ಸೂರ್ಯನಿಂದ ಬರುವ ಕಾಸ್ಮಿಕ್ ಕಿರಣಗಳನ್ನು ಶೋಧಿಸಿ, ವಾತಾವರಣವನ್ನು ಶುದ್ಧಿಕರಿಸಿದೆ. ಆದರೆ ಹೆಚ್ಚಿನ ಪ್ರಮಾಣದ ಕಾರ್ಬನ್ ಡೈ ಆಕ್ಸೈಡ್ ಅನ್ನು ವಾತಾವರಣಕ್ಕೆ ಬಿಟ್ಟು ವಾಯುಮಂಡಲವನ್ನು ಮಲಿನಗೊಳಿಸುತ್ತದ್ದೇವೆ. ಸಕಲ ಜೀವರಾಶಿಗಳ ರಕ್ಷಾಕವಚ ಓಝೋನ್ ವಲಯ ಆಗಿದ್ದು ಅದನ್ನು ಕಾಪಾಡಿಕೊಳ್ಳುವುದು ಮನುಷ್ಯನ ಆದ್ಯ ಕರ್ತವ್ಯವಾಗಿರುತ್ತದೆ.

ಮನುಷ್ಯನ ಅಟ್ಟಹಾಸಕ್ಕೆ ಬಲಿಯಾದ ವಸ್ತು–ವಿಶೇಷಗಳ ಪಟ್ಟಿಯಲ್ಲಿ ಓಝೋನ್ ಪದರವು ಒಂದು. ಅದಿಲ್ಲದಿದ್ದರೆ ಭೂಮಿಯ ಜೀವಜಂತುಗಳು ಸೂರ್ಯನ ನೇರಳಾತೀತ ಕಿರಣಗಳ ನೇರ ಸ್ಪರ್ಶಕ್ಕೆ ಸಿಕ್ಕಿ ಕ್ಯಾನ್ಸರ್‌ನಂತಹ ಮಾರಕ ರೋಗಿಗಳಾಗಿ ಸಿಲುಕುತ್ತಿದ್ದವು ಎಂಬಾತಂಕವಿದೆ.

ಸಾರ್ವಜನಿಕರಲ್ಲಿ ಅಂದರೆ ಪರಿಸರ ಶಿಕ್ಷಣದ ಕಲ್ಪನೆ ಪ್ರಪ್ರಥಮವಾಗಿ ಮೂಡೀ ಬಂದದ್ದು 1972ರಲ್ಲಿ ಮಾನವನು ಸಮಾಜಜೀವಿ ಎನ್ನುವ ಹಾಗೆ ಆತನು ಪರಿಸರ ಅಥವಾ ಪ್ರಕೃತಿಯ ಕೂಸು ಅವನ ಸುತ್ತಮುತ್ತಲು ವೈವಿಧ್ಯಮಯವಾದ ನಿಸರ್ಗದ ಸೊಬಗು ಇದೆ ಅಂದರೆ ಆತನ ಸುತ್ತಮುತ್ತಲು ಹಲವಾರು ಮರಗಿಡಗಳಿವೆ ವಿವಿಧ ಪ್ರಕಾರದ ಪ್ರಾಣಿ–ಪಕ್ಷಿಗಳಿವೆ. ಅಲ್ಲದೆ ವೈವಿಧ್ಯಮಯವಾದ ಜೀವಿಗಳಿವೆ. ಈ ಓಝೋನ್ ಸವಕಳಿಯ ಎರಡು ಪ್ರತ್ಯೇಕ ಆದರೆ ಪರಸ್ಪರ ಸಂಬಂಧವಿರುವ ಹೇಳಿಕೆಗಳನ್ನು ವಿವರಿಸುತ್ತದೆ. ಓಝೋನ್ ಪೃಥ್ವಿಯ ಸಂರಕ್ಷಣಾ ಕವಚ. ವಿಷಾದದ ಸಂಗತಿಯೆಂದರೆ ಇದು ಸಧ್ಯ ಮಾನವ ನಿರ್ಮಿತ ತಪ್ಪುಗಳಿಂದಾಗಿ ತನ್ನ ಸಾಮರ್ಥ್ಯ ಕಳೆದುಕೊಳ್ಳುತ್ತಿದೆ.

ಓಝೋನ್ ಪದರರಕ್ಷಣೆಗೆ ಎಲ್ಲರೂ ಮುಂದಾಗಬೇಕು ಭೂಮಿಯಲ್ಲಿನ ವಾತಾವರಣದ ಸಮತೋಲಕ್ಕೆ ಓಝೋನ್ ಪದರ ಅಗತ್ಯವಾಗಿದ್ದು ಅದರ ರಕ್ಷಣೆಗೆ ಎಲ್ಲರೂ ಪೂರಕವಾಗಿ ನಡೆದುಕೊಳ್ಳಬೇಕು. ಓಝೋನ್ ಪದರ ಹಾನಿಯಿಂದ ಸಕಲ ಜೀವಿಗಳಿಗೆ ಸಂಚಕಾರ ಎದುರಾಗಲಿದೆ. ಓಝೋನ್ ಪದರದ ಮಹತ್ವವನ್ನು ಪ್ರತಿಯೊಬ್ಬರು ಅರ್ಥ ಮಾಡಿಕೊಳ್ಳಬೇಕು. ಅದಕ್ಕೆ ಪೂರಕವಾಗಿ ನಾವು ನಡೆದುಕೊಳ್ಳಬೇಕು. ಪರಿಸರ ಹಾನಿಯಾದಷ್ಟು ಈ ರಕ್ಷಾಕವಚಕ್ಕೆ ತೊಂದರೆಯಾಗಲಿದೆ. ಓಝೋನ್ ಪದರದ ಹಾನಿಯಿಂದ ನೇರಳಾತೀತ ನೀಲ ಕಿರಣಗಳು ಭೂಮಿಯನ್ನು ನೇರವಾಗಿ ಪ್ರವೇಶ ಮಾಡಿ ಜೀವ ಸಂಕುಲಕ್ಕೆ ಹಾನಿ ಉಂಟು

ಮಾಡುತ್ತವೆ. ಇದನ್ನು ತಡೆಯದಿದ್ದರೆ ಭೂಮಿಯ ನಾಶಕ್ಕೆ ನಾಂದಿಯಾಗುತ್ತದೆ. ಇಂಗಾಲದ ಪ್ರಮಾಣದ ಬಳಕೆಗೆ ಕಡಿವಾಣ ಹಾಕಿ ಓಝೋನ್ ಪದರದ ರಕ್ಷಣೆ ಕುರಿತು ಜನರಲ್ಲಿ ಜಾಗೃತಿ ಮೂಡಿಸಬೇಕು ಹಾಗೂ ಶಿತಲೀಕರಣ ಘಟಕಗಳಲ್ಲಿ ಹೊರಸೂಸುವ ಇಂಗಾಲದ ಪ್ರಮಾಣವನ್ನು ಕಡಿಮೆ ಮಾಡಬೇಕು.

- ಪರಿಸರ ಸ್ನೇಹಿಯಾಗಿ ಎಲ್ಲರೂ ಕಾರ್ಯನಿರ್ವಹಿಸಬೇಕು.
- ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಬೇಕು.
- ಪ್ರತಿಯೊಬ್ಬರು ಹೆಚ್ಚು–ಹೆಚ್ಚು ಗಿಡ–ಮರಗಳನ್ನು ಬೆಳಸಿ ಓಝೋನ್ ಪದರದ ರಕ್ಷಣೆ ಮಾಡಬೇಕು.

ಈ ರೀತಿಯಲ್ಲಿ ಅರಿತು ಕಾರ್ಯ ನಿರ್ವಹಿಸುವುದರ ಮೂಲಕ ಓಝೋನ್‌ಪದರ ರಕ್ಷಿಸಬಹುದು.



**ಅಶ್ವಿನಿ. ಡಿ.ಎಸ್**
ಬಿ.ಇಡಿ ಪ್ರಶಿಕ್ಷಣಾರ್ಥಿ

## ಸಾವಿತ್ರ ಬಾಯಿ ಪುಲೆ

ಸಾವಿತ್ರಬಾಯಿ ಪುಲೆ 1831ರಲ್ಲಿ ಮಹಾರಾಷ್ಟ್ರದ ಸತಾರ ಜಿಲ್ಲೆಯ “ನೈಗಾಂನ್”ನಲ್ಲಿ ಹುಟ್ಟಿದರು. ಬಾಲ್ಯ ವಿವಾಹ ರೂಡಿಯಲ್ಲಿದ್ದ ಕಾಲದಲ್ಲಿ ಸಾವಿತ್ರಬಾಯಿ ಪುಲೆ ಜ್ಯೋತಿಬಾ ಪುಲೆ ಅವರನ್ನು ವಿವಾಹವಾದರು. ಮದುವೆಯಾದಾಗ ಅವರಿಗೆ 8ವರ್ಷ ವಯಸ್ಸು ಜ್ಯೋತಿಬಾ ಪುಲೆಅವರಿಗೆ 13ವರ್ಷ ವಯಸ್ಸಾಗಿತ್ತು. ಸಾವಿತ್ರಬಾಯಿ ಅವರ ಯಶಸ್ಸು, ಶ್ರೇಯಸ್ಸಿನ ವಿಕ್ರಮಪಾಲ ಜ್ಯೋತಿಬಾ ಪುಲೆ ಅವರದಾಗಿತ್ತು. ಸ್ತ್ರೀ ಶಿಕ್ಷಣವನ್ನು ತಂದ ಕೀರ್ತಿ ಜ್ಯೋತಿಬಾ ಪುಲೆ ಅವರಿಗೆ ಸಲ್ಲಬೇಕು.

ಸಾವಿತ್ರಬಾಯಿ ಅವರಿಗೆ ಮನೆಯೇ ಮೊದಲ ಪಾಠ ಶಾಲೆ, ಪತಿ ಜ್ಯೋತಿಬಾ ಅವರೇ ಗುರುಗಳು 1847ರಲ್ಲಿ ಸಾವಿತ್ರಬಾಯಿ ಶ್ರೀಮತಿ ಮಿಸಲ್ ಅವರ ನಾಮಲ್ ಶಾಲೆಯಲ್ಲಿ ಶಿಕ್ಷಕಿಯ ತರಬೇತಿ ಪಡೆದರು. ಆಗ ಅವರಿಗೆ 17 ವರ್ಷ. ಹೀಗಾಗಿ ಮಹಾರಾಷ್ಟ್ರದಲ್ಲಿ ತರಭೇತಾದ ಮೊದಲ ಶಿಕ್ಷಕಿಯಾದರು.

**ಶಿಕ್ಷಕಿ** :ಸಾವಿತ್ರಬಾಯಿ ಶ್ರೀ ಭಿಡೆಯವರ ಮನೆಯಲ್ಲಿ ಆರಂಭಗೊಂಡ ಕನ್ಯಾಶಾಲೆಯ ಪ್ರಧಾನ ಶಿಕ್ಷಕಿಯಾದವರು, ಆ ಕಾಲದಲ್ಲಿ ಹಿಂದೂ ಸ್ತ್ರೀಯೊಬ್ಬಳು ಶಿಕ್ಷಕಿಯಾದಳು. ಶಿಕ್ಷಕಿಯಾಗುವುದು ಧರ್ಮಕ್ಕೂ ಸಮಾಜಕ್ಕೂ ದ್ರೋಹ ಬಗೆದಂತೆ, ಅವರ ಪಾಠಶಾಲೆಗೆ ಹೋರಟಾಗ ಕೆಲವರು ಕೇಕೆ ಹಾಕಿ ನಗುತ್ತಿದ್ದರು. ಅವರ ಮೇಲೆ ಕೆಸರು, ಸಗಣಿ ಎರಚಿ ಕಲ್ಲನೂ ತೂರುತ್ತಿದ್ದರು. ಅದಕ್ಕೆ ದೃತಿಗೆಡದ ಸಾವಿತ್ರಬಾಯಿಯವರು ಯಾವಾಗಲು ಒಂದು ಸೀರೆಯನ್ನು ತಮ್ಮ ಬ್ಯಾಗಿನಲ್ಲಿ ಇಟ್ಟುಕೊಳ್ಳುತ್ತಿದ್ದರು. 1848ರಿಂದ1852ರ ಅವಧಿಯಲ್ಲಿ 18 ಪಾಠಶಾಲೆಗಳನ್ನು ಪುಲೆ ದಂಪತಿಗಳು ತೆರೆದರು.

ಇಂದು ಭಾರತದ ಮಹಿಳೆಯರ ಸಮಾಜದ ಎಲ್ಲಾ ಕ್ಷೇತ್ರದಲ್ಲಿ ಸಮಾನತೆಯ ಹಕ್ಕಿಗೆ ಕಾರಣವಾದರು ಮಾತೆ ಸಾವಿತ್ರಬಾಯಿ ಪುಲೆ. ಇವರು ಸಮಾಜದ ಅನಿಷ್ಟ ಪದ್ಧತಿಗಳಾದ ಬಾಲ್ಯ ವಿವಾಹ ಸತಿಸಹಗಮನ ಪದ್ಧತಿ, ಕೇಶ ಮುಂಡನೆಯ ವಿರುದ್ಧ ಹೋರಾಡಿದ ಮಹಿಳೆ.

“ಈ ಎಲ್ಲಾ ಸಾಧನೆಗಳನ್ನು ಪರಿಗಣಿಸಿ, ಬ್ರಿಟಿಷ್ ಸರ್ಕಾರ ಇವರಿಗೆ ‘ಇಂಡಿಯನ್ ಫಸ್ಟ್ ಟೀಚರ್’ ಎಂಬ ಬಿರುದು ನೀಡಲಾಯಿತು”.



**ರಶ್ಮಿ**
ಬಿ.ಇಡಿ ಪ್ರಶಿಕ್ಷಣಾರ್ಥಿ

## ಹಂಪಿ

ಹಂಪೆ ವಿಜಯನಗರ ಜಿಲ್ಲೆಯ ಹೊಸಪೇಟೆಯ ಬಳಿಯಿರುವ ಐತಿಹಾಸಿಕ ಸ್ಥಳ 1336ರಿಂದ 1565ರವರೆಗೆ ಇದು ವಿಜಯನಗರ ಸಾಮ್ರಾಜ್ಯದ ರಾಜಧಾನಿ ಆಗಿತ್ತು ಹಂಪೆಯ ಮೊದಲನೆ ಹೆಸರು "ಹಂಪಾ" ಎಂದಿತ್ತು. ಅಂದರೆ ತುಂಗಾ–ಭದ್ರಾ ನದಿ ಎಂದರ್ಥ. ವರ್ಷಗಳು ಕಳೆದಂತೆ ಇದು ವಿಜಯನಗರ ಮತ್ತು ವಿರೂಪಾಕ್ಷಪುರ ಎಂದು ಕರೆಯಲ್ಪಟ್ಟಿತು. ಹಂಪೆಯನ್ನು ಯುನೆಸ್ಕೋ ವಿಶ್ವ ಪರಂಪರೆಯ ತಾಣ ಎಂದು ಘೋಷಿಸಿದೆ. ವಿಜಯನಗರ ಸಾಮ್ರಾಜ್ಯದ ಒಡೆಯನಾದ ಕೃಷ್ಣದೇವರಾಯನ ರಾಜ್ಯಭಾರಮುಗಿದ ನಂತರ ವಿಜಯನಗರ ಸಾಮ್ರಾಜ್ಯ ತನ್ನ ಪ್ರಾಬಲ್ಯವನ್ನು ನಿಧಾನವಾಗಿ ಕಳೆದುಕೊಳ್ಳುತ್ತಾ ಬಂದು, ಕೊನೆಗೆ ತಾಳೀಕೋಟೆಯ ಯುದ್ಧದಲ್ಲಿ ಮುಸ್ಲಿಂ ಸಾಮ್ರಾಜ್ಯದಿಂದ ಬಂದ ಆಕ್ರಮಣವನ್ನು ತಡೆಯದೆ ಅಂತ್ಯಗೊಂಡಿತು. ಹಂಪೆಯಲ್ಲಿದ್ದ ಅನೇಕ ಸ್ಮಾರಕಗಳನ್ನು ಸುಮಾರು ಆರು ತಿಂಗಳುಗಳ ಕಾಲ ಸೈನಿಕರು ನಾಶ ಮಾಡಿದರು ಎನ್ನುತ್ತದೆ ಇತಿಹಾಸ. ಇಂದು ವಿರೂಪಾಕ್ಷ ದೇವಾಲಯ ಹಜಾರರಾಮ  ದೇವಸ್ಥಾನ ಸಪ್ತಸ್ವರ ಸಂಗೀತ ಹೊರಹೊಮ್ಮಿಸುವ ಕಲ್ಲಿನ ಕಂಭಗಳು, ವಿಶ್ವ ವಿಖ್ಯಾತ ಕಲ್ಲಿನ ರಥ, ಮಹಾನವಮಿ ದಿಬ್ಬ, ಸಾಸಿವೆ ಕಾಳು ಗಣಪತಿ, ಉಗ್ರ ನರಸಿಂಹ, ಕಮಲ ಮಹಲ್, ಬಡವಿ ಲಿಂಗ, ಆನೆ ಲಾಯ ಹೀಗೆ ಹಲವಾರು ಪ್ರೇಕ್ಷಣಿಯ ಸ್ಥಳಗಳನ್ನು ಹಂಪಿಯಲ್ಲಿ ನೋಡಬಹುದು. ಹಂಪಿ ಅನೇಕ ದೇವಾಲಯಗಳಿಗೆ ಮನೆಯಾಗಿದ್ದು ಇದು ಒಂದು ಪ್ರಮುಖ ಧಾರ್ಮಿಕ ಕೇಂದ್ರವಾಗಿದೆ. ಹಾಗಯೇ ಹಂಪಿಯನ್ನು ದೇವಾಲಯ ಪಟ್ಟಣ ಎಂದು ಸಹ ಕರೆಯಲಾಗುವುದು. ಅಲ್ಲದೆ ಹಂಪಿಯು ಎತ್ತರದ ಪರ್ವತಗಳು ಮತ್ತು ಸರಾಗವಾಗಿ ಹರಿಯುವ ನದಿಯಿಂದ ಆವೃತವಾಗಿದೆ.

ಹಾಗಯೇ ಹಂಪೆಯ ವಸ್ತು ಸಂಗ್ರಹಾಲಯವನ್ನು ಭಾರತದ ಪುರಾತತ್ವ ಸಮೀಕ್ಷೆ ಸ್ಥಾಪಿಸಿದೆ. ಹಂಪೆಯನ್ನು ಶಿವನಿಗೆ ಅರ್ಪಿತವಾದ ಹಂಪೆ ಎಂದು ಸಹ ಕರೆಯುತ್ತಾರೆ. ಹಂಪೆಯು ಪ್ರವಾಸೋದ್ಯಮದ ದೃಷ್ಟಿಯಿಂದಲೂ ಸಹ ಮಹತ್ವವಾಗಿರುವ ಈ ಪಟ್ಟಣವು ಅಸಂಖ್ಯಾತ ಸಂಖ್ಯೆಯಲ್ಲಿ ಕೇವಲ ಭಾರತೀಯರಿಂದ ಮಾತ್ರವಲ್ಲದೆ ವಿದೇಶಿ ಪ್ರವಾಸಿಗರಿಂದಲೂ ಸಹ ಬೇಟಿ ನೀಡಲ್ಪಡುತ್ತದೆ.

ತುಂಗಾಭದ್ರಾ ನದಿಯ ಅತಿ ಪುರಾತನ ಹೆಸರು ಪಂಪ . ಆಂಗ್ಲೀಕರಣದ ಪ್ರಭಾವದಿಂದಾಗಿ ಕ್ರಮೇಣ ಇದಕ್ಕೆ ಹಂಪೆ ಅಥವಾ ಹಂಪಿ ಎಂಬ ಹೆಸರು ಬಂದಿತು. ಏಕೆಂದರೆ ಈ ಪಟ್ಟಣವು ತುಂಗಾಭದ್ರಾ ನದಿ ದಂಡೆಯ ಮೇಲೆಯೇ ನೆಲೆಸಿದೆ.

ಕಾಲಕ್ರಮೇಣ ಇದನ್ನು ವಿಜಯನಗರ ಅಥವಾ ವಿರೂಪಾಕ್ಷಪುರ ಎಂಬ ಹೆಸರುಗಳಿಂದಲೂ ಸಹ ಕರೆಯಲಾಯಿತು. ತುಂಗಾಭದ್ರಾ ನದಿ ಬೆಟ್ಟಗುಡ್ಡಗಳಿಂದ ಸುತ್ತುವರೆದಿರುವ ಈ ಐತಿಹಾಸಿಕಪಟ್ಟಣವು ಪ್ರಸ್ತುತ ಅವಶೇಷಗಳ ನಡುವೆ ಮುಚ್ಚಿ ಹೋಗಿದ್ದರೂ ಸಹ ಗತಕಾಲದ ತನ್ನ ವೈಭವದ ಕಥೆಯನ್ನು ಅತ್ಯುತಮ ಕಲಾತ್ಮಕತೆಯ ಸ್ಮಾರಕಗಳನ್ನು ಭೇಟಿನೀಡುವ ಪ್ರತಿಯೊಬ್ಬ ಪ್ರವಾಸಿಗನಿಗೆ ಯಾವುದೇ ಭೇದವಿಲ್ಲದೇ ಸಾರಿ ಹೇಳುತ್ತದೆ.

ಒಟ್ಟಾರೆಯಾಗಿ ಹಂಪಿಯು ತನ್ನ ಕಲೆ, ವಾಸ್ತುಶಿಲ್ಪ, ಚಿತ್ರಕಲೆ, ತನ್ನ ಐತಿಹಾಸಿಕತೆಗೆ ತನ್ನದೇ ಆದ ಪಾಮುಖ್ಯತೆಯನ್ನು ಹೊಂದಿದ್ದು ಇತಿಹಾಸದಲ್ಲಿ ತನ್ನದೇ ಆದಂತಹ ಚಾಪನ್ನು ಮೂಡಿಸಿದೆ.



**ಕಾವ್ಯ ವಿ**
ಬಿ.ಇಡಿ ಪ್ರಶಿಕ್ಷಣಾರ್ಥಿ

## ಹಳೇಬೀಡು

ಹಳೇಬೀಡು ಕರ್ನಾಟಕದ ಪ್ರಮುಖ ಪ್ರವಾಸಿ ಸ್ಥಳಗಳಲ್ಲೊಂದು ಮತ್ತು ಐತಿಹಾಸಿಕ ಹಿನ್ನಲೆಯಿರುವ ಸ್ಥಳ ಶಿಲ್ಪಕಲೆಗೆ ಹೆಸರಾಗಿರುವ ಈ ಸ್ಥಳವು ಹಾಸನ ಜಿಲ್ಲೆಯಲ್ಲಿದೆ. ಈ ಊರು ಒಂದೊಮ್ಮೆ ಹೊಯ್ಸಳ ವಂಶದ ರಾಜಧಾನಿಯಾಗಿತ್ತು. ಹೊಯ್ಸಳರು ಹತ್ತನೆಯ ಶತಮಾನದ ಅಂತ್ಯದವರೆವಿಗೂ ಈಗಿನ ಕರ್ನಾಟಕವೂ ಸೇರಿದಂತೆ ತಮಿಳುನಾಡು ಮತ್ತು ಆಂಧ್ರಪ್ರದೇಶದ ಕೆಲವು ಭಾಗಗಳನ್ನು ಆಳಿದರು. ಮೂಲತಃ ಹೊಯ್ಸಳರು ಕಲ್ಯಾಣದ ಚಾಲುಕ್ಯರಿಗೆ ಸಾಮಂತರಾಗಿದ್ದುಕೊಂಡೇ ಅಧಿಕಾರವನ್ನು ನಡೆಸಿದರು. 12ನೇಯ ಶತಮಾನದ ಆರಂಭದಲ್ಲಿ ರಾಜ ವಿಷ್ಣುವರ್ಧನ ಮತ್ತು ವೀರಬಲ್ಲಾಳನ ಕಾಲದಲ್ಲಿಚಾಲುಕ್ಯರು ಅವನತಿಯನ್ನು ಕಂಡಾಗ ಇವರು ಹೆಚ್ಚು ಸ್ವತಂತ್ರವಾಗಿ ಆಡಳಿತವನ್ನು ನಡೆಸುತ್ತಾರೆ. ಹೊಯ್ಸಳರ ಮೂಲ ಊರು ಇಂದಿನ ಚಿಕ್ಕಮಗಳೂರುಜಿಲ್ಲೆಯ ಮೂಡಿಗರೆ ತಾಲ್ಲೂಕಿನಲ್ಲಿರುವ ಅಂಗಡಿ ಎಂಬ ಪುಟ್ಟ ಗ್ರಾಮ.

ಇಂದಿನ ಹಳೇಬೀಡು ಹೊಯ್ಸಳರ ಬಹುಕಾಲದ ರಾಜಧಾನಿಯಾಗಿ ಮೆರೆದಿದ್ದ ಊರು. ಹೊಯ್ಸಳರಿಗಿಂತ ಮುಂಚೆನಿಂದಲೂ ಅಸ್ತಿತ್ವದಲ್ಲಿದ್ದ ಊರಾಗಿದ್ದರಿಂದ ಜನಪದವಾಗಿ ಹಳೆಯ ಬೀಡು  ಹಳೇಬೀಡು ಎಂಬ ರೂಪಾಂತರಗಳನ್ನು ಕಂಡಿದೆ. ಸುಮಾರು 9ನೇಯ ಶತಮಾನದಲ್ಲಿ ರಾಷ್ಟ್ರಕೂಟರ ದೊರೆ ದೋರ ಎಂಬುವವನು ಈ ಊರಿನಲ್ಲಿ ದೊಡ್ಡಕೆರೆಯೊಂದನ್ನು ಕಟ್ಟಿಸಿದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಈ ಕೆರೆಯು 12000 ಎಕರೆಗೂ ಮೀರಿ ವ್ಯಾಪ್ತಿಯನ್ನು ಹೊಂದಿದ್ದು ಈಗಲೂ ಕೆರೆಯು ನೀರಿನಿಂದ ತುಂಬಿಕೊಂಡಾಗ ಸಮುದ್ರದಂತೆ ತೋರುತ್ತದೆ.

ಹಳೇಬೀಡಿನ ಐತಿಹಾಸಿಕ ನಾಗರೀಕತೆಯು ಇಂದಿಗಿಂತಲೂ ಉತ್ತಮವಾಗಿಯೇ ಇತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ಅಂದು ಹೆಚ್ಚಿನವರು ಕೃಷಿಕರಾಗಿದ್ದು ವಸ್ತು ವಿನಿಮಯ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿರುತ್ತಾರೆ ಹೊಯ್ಸಳರ ರಾಜಕೀಯ ಮತ್ತು ಆರ್ಥಿಕ ಕೇಂದ್ರಸ್ಥಾನವಾಗಿದ್ದ ಈ ಊರು ಇಂದಿನ ಯಾವ ರಾಜಧಾನಿಗೂ ಕಡಿಮೆ ಇರಲಿಲ್ಲವೆಂದು ಹೇಳಬಹುದು. ಹಳೇಬೀಡಿನ ಜನಸಂಖ್ಯೆ ಸುಮಾರು ಹತ್ತು ಸಾವಿರದಷ್ಟಿದ್ದು ಎಲ್ಲಾ ಅತ್ಯಾದುನಿಕ ಸೌಲಭ್ಯಗಳು ದೊರಕುತ್ತಿವೆ. ವಾಸಿಸುತ್ತಿರುವ ಜನರಲ್ಲಿ ಅರ್ಧದಷ್ಟು ಜನರು ಕೃಷಿಕರಿದ್ದು ಉಳಿದಂತೆ ಸರ್ಕಾರಿ ನೌಕರರು, ವ್ಯಾಪಾರಸ್ಥರು ಮುಂತಾಗಿ ಹಂಚಿಹೋಗಿದ್ದಾರೆ. ಇಂದಿಗೂ ಕೃಷಿ ಉತ್ಪನ್ನಗಳೇ ಇಲ್ಲಿನ ವ್ಯಾಪಾರದ ಮುಖ್ಯವಸ್ತು. ಹೊಯ್ಸಳರ ಕಾಲದಲ್ಲಿ ಈ ಪ್ರಾಂತ್ಯವು ದಟ್ಟವಾದ ಮಲೆನಾಡಾಗಿದ್ದು ಕಾಡಿನ ಉತ್ಪನ್ನಗಳು ಹೆಚ್ಚಾಗಿ ಬಳಕೆಯಲ್ಲಿತ್ತು. ಅಡಿಕೆ, ತೆಂಗು, ಬಾಳೆ, ಕಾಳುಮೆಣಸು ಮತ್ತು ಹುರಳಿ, ರಾಗಿ ಮುಂತಾದ ಧಾನ್ಯಗಳನ್ನು ಬೆಳೆಯುತ್ತಿದ್ದರು . ಬಂಗಾರ ಮುಂತಾದ ಬೆಲೆಬಾಳುವ ವಸ್ತುಗಳ ಬಳಕೆಯೂ ಕಡಿಮೆಯೇ ಇದ್ದೀತೆಂದು ಹೇಳಬಹುದು. ಆದರೆ ಹಳೆಬೀಡು ಅರೆಮಲೆನಾಡು ಪ್ರದೇಶಕ್ಕೆ ಸೇರಿದ್ದು ಎಲ್ಲ ಬಗೆಯ ತರಕಾರಿಗಳನ್ನು ಹೆಚ್ಚು ಬೆಳೆಯುತ್ತಾರೆ.

ಈ ರೀತಿಯಾಗಿ ಹಳೆಬೀಡು ಪ್ರಾಂತ್ಯವು ತನ್ನದೆ ಆದ ವೈಶಿಷ್ಟ್ಯದಿಂದ ಕೂಡಿದ್ದು ತನ್ನದೇ ಆದ ಐತಿಹಾಸಿಕತೆಯನ್ನು ಹೊಂದಿದೆ. ಹಾಗೆಯೇ ಇದು ಅತ್ಯಂತ್ಯ ಪ್ರಮುಖ ಆಕರ್ಷಣೆಯ ಪ್ರವಾಸಿ ತಾಣಗಳಲ್ಲಿ ಒಂದಾಗಿ ಕಂಗೊಳಿಸುತ್ತದೆ.



**ಶೃತಿ ಕೆ.ಪಿ**
ಬಿ.ಇಡಿ ಪ್ರಶಿಕ್ಷಣಾರ್ಥಿ

## ಕೆಳದಿಯ ಚೆನ್ನಮ್ಮ

ಕೆಳದಿಯ ಚೆನ್ನಮ್ಮ ಕ್ರಿ.ಶ1672ರಿಂದ ಕ್ರಿ.ಶ.1697ರವರೆಗೆ ಕೆಳದಿ ಸಂಸ್ಥಾನವನ್ನು ಆಳಿದ ವೀರ ಮಹಿಳೆ. ರಾಣಿಚೆನ್ನಮ್ಮ ಛತ್ರಪತಿ ಶಿವಾಜಿಯ ಎರಡನೇಯ ಮಗನಾದ ರಾಜರಾಮನಿಗೆ ನೀಡಿದ ಆಶ್ರಯ ಮತ್ತು ಅದರ ಪರಿಣಾಮವಾಗಿ ಯುದ್ಧಕ್ಕೆ ಬಂದ ಔರಂಗಜೇಬನ ಸೈನ್ಯವನ್ನು ಸೋಲಿಸಿದ್ದು ಅವಳ ಆಳ್ವಿಕೆಯ ಮಹತ್ವದ ಸಂಗತಿಗಳು ತನ್ನ ಸ್ಥಿರ ಸಂಕಲ್ಪ ದೂರದೃಷ್ಟಿ ಹಾಗೂ ಕಲಿತನಗಳಿಂದ ಇಕ್ಕೇರಿ ಸಂಸ್ಥಾನವನ್ನು ವಿಪತ್ತಿನಿಂದ ಪಾರು ಮಾಡಿದಳೆಂದು ಚೆನ್ನಮ್ಮ ಪ್ರಸಿದ್ಧಳಾಗಿದ್ದಾಳೆ.

**ಆಳ್ವಿಕೆ** :– ಚೆನ್ನಮ್ಮನು ಕೋಟಿಪುರದ ನಾಯಕ ಸಮುದಾಯಕ್ಕೆ ಸೇರಿದ ಮಗಳು ಹಾಗೂ ಒಂದನೆಯ ಸೋಮಶೇಖರ ನಾಯಕನ ಮಡದಿ. ಲಿಂಗಣ್ಣ ಕವಿಯ 'ಕೆಳದಿನೃಪವಿಜಯ' ಎಂಬ ಗ್ರಂಥ ಹಾಗೂ ಇತರ ಆಧಾರಗಳಿಂದ ಚೆನ್ನಮ್ಮನ ಆಳ್ವಿಕೆಯ ಮುಖ್ಯ ಘಟನೆಗಳು ತಿಳಿದು ಬರುತ್ತವೆ.

ಕೆಳದಿಯ ರಾಜ ಸೋಮಶೇಖರನಾಯಕ ಪ್ರಾರಂಭದಲ್ಲಿ ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಿದ್ದರೂ ದುರ್ಜನರ ಸಹವಾಸದಿಂದ ದುಶ್ಚಟಗಳಿಗೆ ಬಲಿಯಾಗಿ ಕೊನೆಗೆ 1671ರಲ್ಲಿ ಕೊಲೆಯಾದ. ಅವನಿಗೆ ಮಕ್ಕಳಿರಲಿಲ್ಲ ಕೆಳದಿ ಸಂಸ್ಥಾನದಲ್ಲಿ ಅರಾಜಕತೆಯುಂಟಾಯಿತು. ನಾಯಕ ಮನೆತದ ವಿರೋಧಿಗಳು ತಮಗೆ ಬೇಕಾದವನೊಬ್ಬನನ್ನು ನಾಯಕಪಟ್ಟಕ್ಕೆ ತರಲು ಹವಣಿಸಿದರು. ಅಂತ ದುರ್ಭರ ಸನ್ನಿವೇಶದಲ್ಲಿ ಚೆನ್ನಮ್ಮ ಆಡಳಿತವನ್ನು ವಹಿಸಿಕೊಂಡು ಅಸಾಧಾರಣ ಜಾಣ್ಮೆಯಿಂದ ಸಂಸ್ಥಾನದಲ್ಲಿ ಶಾಂತಿ ಸ್ಥಾಪಿಸಿದಳು. ಕೆಳದಿಯಲ್ಲುಂಟಾಗಿದ್ದ ದುಃಸ್ಥಿತಿಯನ್ನು ಉಪಯೋಗಿಸಿಕೊಂಡು ಬಿಜಾಪುರದ ಸುಲ್ತಾನ ಮತ್ತು ಇತರ ಪಾಳೆಯಗಾರರು ಕೆಳದಿಯನ್ನು ಕಬಳಿಸಲು ಹೊಂಚು ಹಾಕಿದ್ದರು. ವೈರಿಗಳು ಸಂಚಿನಿಂದಾಗಿ ಚೆನ್ನಮ್ಮ ರಾಜಧಾನಿಯಿಂದ ತಲೆ ತಪ್ಪಿಸಿಕೊಳ್ಳಬೇಕಾಯಿತು.

ಅವಳು ಗುರುಬಸಪ್ಪದೇವ, ಮತ್ತು ದಂಡನಾಯಕ ಕೃಷ್ಣಪ್ಪಯ್ಯ ಹಾಗೂ ತಿಮ್ಮರಸಯ್ಯ ಇವರ ಸಹಾಯದಿಂದ ವೈರಿಗಳನ್ನು ಸದೆಬಡಿದು ಸಂಸ್ಥಾನವನ್ನು ವಿಪತ್ತಿನಿಂದ ಪಾರು ಮಾಡಿದಳು. 1960ರಲ್ಲಿ ಕೆಳದಿ ಮತ್ತು ಮೊಗಲ್ ಸೈನ್ಯಗಳ ನಡುವೆ ಯುದ್ಧ ನಡೆಯಿತು. ಕದನದಲ್ಲಿ ಮೊಗಲರ ಸೋಲಿನಿಂದ ರಾಣಿ ಚೆನ್ನಮ್ಮಾಜಿಯ ಕೀರ್ತಿ ಇಡೀ ಭಾರತದಲ್ಲಿ ಹಬ್ಬಿತು. ಈ ಸಂಗತಿಯನ್ನು ಕುರಿತ ಜನಪದ ಗೀತೆಗಳು ಇಂದಿಗೂ ಕನ್ನಡನಾಡಿನಲ್ಲಿ ಪ್ರಚಾರದಲ್ಲಿವೆ. ಚೆನ್ನಮ್ಮ ಕಣಿವೆಗಳಲ್ಲಿ ವೈರಿಸೈನ್ಯವನ್ನು ಸಿಲುಕಿಸಿ ಔರಂಗಜೇಬನು ಬರುವಂತೆ ಮಾಡಿದಳು.



**ವಿದ್ಯಾಶ್ರೀ ಡಿ. ಹೆಚ್.**
ಬಿ.ಇಡಿ ಪ್ರಶಿಕ್ಷಣಾರ್ಥಿ

## ಶಿವಪ್ಪನಾಯಕ (1645–1660)

ಕೆಳದಿ ಶಿವಪ್ಪನಾಯಕ ಎಂದು ಜನಪ್ರಿಯವಾಗಿ ಕರೆಯಲ್ಪಡುವ ಶಿವಪ್ಪನಾಯಕ ಒಬ್ಬ ಭಾರತೀಯ ರಾಜ ಮತ್ತು ಕೆಳದಿ ನಾಯಕ ಸಾಮ್ರಾಜ್ಯದ ಆಡಳಿತಗಾರ ಕೆಳದಿ ನಾಯಕರುಗಳು, ಕರ್ನಾಟಕದಲ್ಲಿ 16ನೇಯ ಶತಮಾನದ ಕೊನೆಯಲ್ಲಿ ಶಿವಮೊಗ್ಗದಲ್ಲಿ ಉತ್ತುಂಗದಲ್ಲಿದ್ದ ನಾಯಕರು. 1763 ಮೈಸೂರು ಸಾಮ್ರಾಜ್ಯಕ್ಕೆ ಬಲಿಯಾಗುವ ಮೊದಲು ಆಧುನಿಕ ಕರ್ನಾಟಕದ ಕರಾವಳಿ, ಬೆಟ್ಟ ಮತ್ತು ಕೆಲವು ಆಂತರಿಕ ಜಿಲ್ಲೆಗಳನ್ನು ಒಳಗೊಂಡ ಒಂದು ಸ್ಥಾಪಿತ ಸಾಮ್ರಾಜ್ಯವನ್ನು ನಿರ್ಮಿಸಿದರು ಆಸಮಯದಲ್ಲಿ ಇದನ್ನು ಹೈದರ್‌ಅಲಿ ಆಳುತ್ತಿದ್ದ ಅವರನ್ನು ಸಿಸ್ಟಿನಾ ಎಂದು ಕರೆಯಲಾಗುತ್ತಿತ್ತು. ಶಿವಪ್ಪನಾಯಕ ಅವರು ಸಿಸ್ಟ ಎಂಬ ತೆರಿಗೆ ವ್ಯವಸ್ಥೆಯನ್ನು ಪರಿಚಯಿಸಿದರು.

**ವಿಜಯಗಳು** – ಶಿವಪ್ಪನಾಯಕನನ್ನು ಸಮರ್ಥ ಆಡಳಿತಗಾರ ಮತ್ತು ಸೈನಿಕ ಎಂದು ಸ್ಮರಿಸಲಾಗುತ್ತದೆ ಅವರು 1645ರಲ್ಲಿ ಸಿಂಹಾಸನವನ್ನು ಏರಿದರು ಈ ಸಮಯದಲ್ಲಿ ವೆಲ್ಲೂರಿನಿಂದ ಆಳ್ವಿಕೆ ನಡೆಸುತ್ತಿದ್ದ ವಿಜಯನಗರ ಸಾಮ್ರಾಜ್ಯದ ಕೊನೆಯ ಆಡಳಿತಗಾರರಾದ ಶ್ರೀರಂಗರಾಯ ಅವರನ್ನು ಬಿಜಾಪುರ ಸುಲ್ತಾನರು ಸೋಲಿಸಿದರು ಮತ್ತು ಶಿವಪ್ಪನನ್ನು ಆಶ್ರಯಿಸಿದರು. 1653ರ ಹೊತ್ತಿಗೆ ಪೋರ್ಚುಗೀಸರ ಬೆಳೆಯುತ್ತಿರುವ ಬೆದರಿಕೆಯನ್ನು ತೆಗೆದು ಹಾಕಲಾಯಿತು ಮತ್ತು ಮಂಗಳೂರು, ಕುಂದಾಪುರ ಮತ್ತು ಹೊನ್ನಾವರ ಬಂದರುಗಳನ್ನು ಕೆಳದಿ ನಿಯಂತ್ರಣಕ್ಕೆ ತರಲಾಯಿತು. ಕನ್ನಡ ಕರಾವಳಿಯನ್ನು ವಶಪಡಿಸಿಕೊಂಡ ಅವರು ಆಧುನಿಕ ಕೇರಳದ ಕಾಸರಗೋಡು ಪ್ರದೇಶಕ್ಕೆ ಮೆರವಣಿಗೆ ನಡೆಸಿದರು, ಮತ್ತು ನಿಲೇಶ್ವರದಲ್ಲಿ ವಿಜಯದ ಸ್ತಂಭವನ್ನು ಸ್ಥಾಪಿಸಿದರು. ಚಂದ್ರಗಿರಿ, ಬೇಕಲ್ ಮತ್ತು ಮಂಗಳೂರು ಕೋಟೆಗಳನ್ನು ಶಿವಪ್ಪನಾಯಕ ನಿರ್ಮಿಸಿದ್ದಾರೆ.

ನಂತರ ಅವರು ತುಂಗಭದ್ರಾನದಿಯ ಉತ್ತರಕ್ಕೆ ಆಕ್ರಮಣ ಮಾಡಿದರು, ಮತ್ತು ಆಧುನಿಕ ಧಾರವಾಡ ಜಿಲ್ಲೆಯ ಪ್ರದೇಶವನ್ನು ಬಿಜಾಪುರ ಸುಲ್ತಾನರಿಂದ ವಶಪಡಿಸಿಕೊಂಡರು. ದಕ್ಷಿಣದಲ್ಲಿ ಅವರು ಆಧುನಿಕ ಮೈಸೂರು ಜಿಲ್ಲೆಯ ಶ್ರೀರಂಗಪಟ್ಟಣದ ಮೇಲೆ ಆಕ್ರಮಣ ಮಾಡಿ ಮುತ್ತಿಗೆ ಹಾಕಿದಾಗ ಅವನ ಸೈನ್ಯದಲ್ಲಿ ಸಾಂಕ್ರಾಮಿಕ ರೋಗವು ಉಂಟಾಯಿತು. ದಕ್ಷಿಣದಲ್ಲಿ ಕರಾವಳಿ ಪ್ರದೇಶದ ಎಲ್ಲಾ ಪೋರ್ಚುಗೀಸ್ ಕೋಟೆಗಳನ್ನು ವಶಪಡಿಸಿಕೊಳ್ಳುವ ಮೂಲಕ 'ಕಿನಾರ' ಪ್ರದೇಶದಲ್ಲಿ ಪೋರ್ಚುಗೀಸ್ ರಾಜಕೀಯ ಶಕ್ತಿಯನ್ನು ನಾಶಪಡಿಸಿದರು.



**ಚೈತ್ರ ಬಿ**
ಬಿ.ಇಡಿ ಪ್ರಶಿಕ್ಷಣಾರ್ಥಿ

# ಭಗತ್ ಸಿಂಗ್

ಭಗತ್‌ಸಿಂಗ್ (1907–1931) ಭಾರತ ಸ್ವಾತಂತ್ರ್ಯ ಸಂಗ್ರಾಮದ ಕ್ರಾಂತಿಕಾರಿ ಮತ್ತು ಸ್ವತಂತ್ರ್ಯ ಹೋರಾಟಗಾರ. ಜನನ ಜರನವಾಲಾ ತಾಲ್ಲೂಕಿನ ಬಂಗಾ ಎಂಬ ಹಳ್ಳಿಯಲ್ಲಿ ಜನಿಸಿದರು. ಅವರ ತಾಯಿ ಶ್ರೀಮತಿ ವಿದ್ಯಾವತಿ ಮತ್ತು ಜೀವ ವಿಮಾ ಕಂಪನಿಯಲ್ಲಿ ಏಜೆಂಟರಾಗಿ ವೃತ್ತಿ ಮಾಡುತ್ತಿದ್ದರು ತಂದೆ ಕಿಶನ್‌ಸಿಂಗ್ ಭಗತ್ ಮೇಲೆ ಅತೀವ ಪ್ರಭಾವವನ್ನು ಬೀರಿದ್ದವರೆಂದರೆ ಅವರ ಚಿಕ್ಕಪ್ಪ ಅಜಿತ್‌ಸಿಂಗ್

ಮಹಾತ್ಮ ಗಾಂಧಿಯವರ ಅಹಿಂಸಾವಾದದ ಬಗ್ಗೆ ಭಗತ್‌ಸಿಂಗ್‌ಗೆ ಹೆಚ್ಚು ನಂಬಿಕೆ ಇರಲಿಲ್ಲ. ಮದುವೆಯಾಗಲು ನಿರಾಕರಿಸಿದ ಅವರು ದೇಶಕ್ಕಾಗಿ ತಮ್ಮ ಜೀವನವನ್ನು ಮುಡಿಪ್ಪಾಗಿಟ್ಟರು. ದೆಹಲಿಯ ಸೆಂಟ್ರಲ್ ಅಸೆಂಬ್ಲಿಯಲ್ಲಿ ಬಾಂಬ್ ಎಸೆದ ಅವರು ಬ್ರಿಟಿಷ್ ಪೊಲೀಸರಿಗೆ ಶರಣಾದರು, ಆದರೆ ಬಾಂಬ್ ಎಸೆತದಿಂದ ಯಾವುದೇ ಸಾವು ನೋವು ಆಗಿರಲಿಲ್ಲ. ಬ್ರಿಟಿಷರ ಗಮನ ಸೆಳೆದು ಸತ್ಯ ಅರುಹುವುದೇ ಭಗತ್ ಅವನ ಗೆಳೆಯರ ಉದ್ದೇಶವಾಗಿತ್ತು ಹೀಗಾಗಿ ರಿವಾಲ್ವಾರ್ ಎಸೆದು ತಪ್ಪಿಸಿಕೊಳ್ಳುವ ಪ್ರಯತ್ನ ಕೂಡ ಮಾಡದೆ "ಇನ್ಕ್ವಿಲಾಬ್ ಜಿಂದಾಬಾದ್"ಎಂದು ಕೂಗುತ್ತಲೇ ಸೆರೆಯಾದರು. ಸಮಾಜವಾದ ಮತ್ತು ಸಮಾಜವಾದಿ ಕ್ರಾಂತಿಯ ಬಗೆಗಿನ ಸಾಹಿತ್ಯವನ್ನು ಅವರು ಚಿಕ್ಕ ವಯಸ್ಸಿನಲ್ಲಿಯೇ ಓದಲಾರಂಬಿಸಿದರು. ಅವರಲ್ಲಿದ್ದ ಓದಿನ ಪ್ರೀತಿ ಬದುಕಿನ ಕೊನೆಕ್ಷಣದವರೆಗೂ ಇತ್ತು ಭಗತ್‌ಸಿಂಗ್ ಪರ ವಕೀಲ ಪ್ರಾಣನಾಥ್ ಮೆಹ್ತಾ ಕೊನೆಯದಾಗಿ ಭೇಟಿಯಾದಾಗ ಭಗತ್ ನಾನು ಹೇಳಿದ್ದು "The Revolutionary lenis" ಪುಸ್ತಕ ತಂದಿದ್ದಿರಾ ? ಎಂದು ಕೇಳಿದರು. ಪುಸ್ತಕ ಕೈಗೆ ಬರುತ್ತಿದ್ದಂತೆ ಓದಲು ಕುಳಿತೇ ಬಿಟ್ಟರು ! ನಾಳೆ ನೇಣಿಗೆ ಕೊರಳೊಡ್ಡುತ್ತಿರುವ ವ್ಯಕ್ತಿ ಹೀಗೆ ಇರಲು ಸಾಧ್ಯವೇ ಎಂದು ರೋಮಾಂಚನಗೊಂಡ ಮೆಹ್ತಾ "ದೇಶವಾಸಿಗಳಿಗೆ ನಿಮ್ಮ ಸಂದೇಶವೇನು" ಎಂದಾಗ ಭಗತ್‌ಸಿಂಗ್ ಪುಸ್ತಕದಿಂದ ತಲೆಯೆತ್ತದೆ "ಸಾಮ್ರಾಜ್ಯಷಾಹಿಗೆ ಧಿಕ್ಕಾರ, ಇನ್ಕ್ವಿಲಾಬ್ ಜಿಂದಾಬಾದ್" ಈ ಎರಡು ಘೋಷಣೆಗಳನ್ನು ತಿಳಿಸಿ ಎಂದರು.

ಉತ್ತಮ ನಟರೂ ಆಗಿದ್ದು ಭಗತ್ ಕಾಲೇಜಿನಲ್ಲಿ ನಾಟಕಗಳಲ್ಲಿ ಭಾಗವಹಿಸುತ್ತಿದ್ದರು. ಬಾಲ್ಯದಲ್ಲಿ ಭಗತ್‌ಸಿಂಗ್ ಬ್ರಿಟಿಷರೊಂದಿಗೆ ಹೋರಾಟ ನಡೆಸಲು ಹೊಲಗದ್ದೆಗಳಲ್ಲಿ ಭತ್ತದ ಬದಲು ಬಂದೂಕುಗಳನ್ನು ಬೆಳೆಯಬೇಕೆಂದು ಹೇಳುತ್ತಿದ್ದರು.

ದೇಶದ ಸ್ವಾತತ್ರ್ಯಕ್ಕಾಗಿ ಮಡಿದ ಭಗತ್‌ಸಿಂಗ್ ರಾಜಗುರು ಮತ್ತು ಸುಖದೇವ್ ಅವರನ್ನು ಅನೌಪಚಾರಿಕವಾಗಿ "ಹುತಾತ್ಮ"ರು ಎಂದು ಕರೆಯಲಾಗುತ್ತಿದೆಯೇ ಹೊರತು ಭಾರತ ಸರ್ಕಾರದಿಂದ ಅಧಿಕೃತವಾಗಿ ಅವರಿಗೆ 'ಹುತಾತ್ಮ' ಪಟ್ಟ ಸಿಕ್ಕಿಲ್ಲ ಸುಖ್‌ದೇವ್ ಕುಟುಂಬ ಈ ಮೂವರಿಗೂ ಹುತಾತ್ಮ ಪಟ್ಟ ನೀಡುವಂತೆ ಹೋರಾಡುತ್ತಲೇ ಇದೆ.

1931ರ ಮಾರ್ಚ್23ರಂದು ಸಂಜೆ 7 ಗಂಟೆ 33 ನಿಮಿಷಗಳ ಸಮಯದಲ್ಲಿ ತಮ್ಮ ಇಬ್ಬರು ಸಂಗಾತಿಗಳಾದ ರಾಜಗುರು ಮತ್ತು ಸುಖದೇವರರ ಜೊತೆ ಗಲ್ಲಿಗೇರಿಸಲ್ಪಟ್ಟಾಗ ಭಗತ್‌ಸಿಂಗ್ ಕೇವಲ 23 ವರ್ಷ. ಬ್ರಿಟಿಷ್ ಪೋಲಿಸ್ ಅಧಿಕಾರಿಗೆ ಗುಂಡಿಕ್ಕಿದ ಆರೋಪದ ಮೇಲೆ ಅವರನ್ನು ನೇಣಿಗೇರಿಸಲಾಯಿತು.

ಮಾರ್ಚ್ 24, 1931 ರಂದು ಅವರನ್ನು ನೇಣಿಗೇರಿಸುವುದೆಂದೂ ತೀರ್ಮಾನಿಸಲಾಗಿತ್ತು. ಆದರೆ ಅದನ್ನು 11 ಗಂಟೆ ಹಿಂದೂಡಿ ಮಾರ್ಚ್ 23, 1931. 7–30ಕ್ಕೆ ಗಲ್ಲಿಗೆರಿಸಲಾಯಿತು. ನಿಗದಿಪಡಿಸಿದ ವೇಳೆಗಿಂತ ಒಂದು ಗಂಟೆ ಮೊದಲೆ ಭಗತ್‌ಸಿಂಗ್‌ರನ್ನು ಗಲ್ಲಿಗೆರಿಸಲಾಯಿತು. ಮತ್ತು ಸತ್ಲೆಜ್ ನದಿಯ ದಡದಲ್ಲಿ ಜೈಲು ಅಧಿಕಾರಿಗಳೇ ರಹಸ್ಯವಾಗಿ ಅಂತ್ಯಕ್ರಿಯೆ ನೇರವೇರಿಸಿದರು.



**ಅಕ್ಷತ ಎನ್.ಬಿ**

ಬಿ.ಇಡಿ ಪ್ರಶಿಕ್ಷಣಾರ್ಥಿ

# ಬಾಲ ಗಂಗಾಧರ ತಿಲಕ

ಲೋಕಮಾನ್ಯ ಬಾಲ ಗಂಗಾಧರ ತಿಲಕ (23/07/1856 – 01/08/1920) ಭಾರತೀಯ ರಾಷ್ಟ್ರೀಯವಾದಿ ಸಮಾಜ ಸುಧಾರಕ ಹಾಗೂ ಸ್ವಾತಂತ್ರ್ಯ ಹೋರಾಟಗಾರರಾದ ತಿಲಕರು ಬಹುಶಃ ಭಾರತದ ಸ್ವಾತಂತ್ರ್ಯ ಹೋರಾಟದ ಚಳುವಳಿಯ ಮೊದಲನೇ ಜನಪ್ರಿಯ ನಾಯಕ ಭಾರತೀಯ ಪ್ರಜೆಯಲ್ಲಿ ಸಂಪೂರ್ಣ ಸ್ವರಾಜ್ಯದ ಕಿಚ್ಚು ಹಚ್ಚಿದ ತಿಲಕರು ಹಿಂದೂ ರಾಷ್ಟ್ರೀಯವಾದದ ಪಿತಾಮಹ ಎಂದು ಹೆಸರಾಗಿದ್ದಾರೆ.

**ಬಾಲ್ಯ** ; ತಿಲಕರು ಹುಟ್ಟಿದ್ದು 1856ರ ಜುಲೈ 23ರಂದು ಮಹರಾಷ್ಟ್ರದ ರತ್ನಗಿರಿಯ ಮಧ್ಯಮ ವರ್ಗದ ಕುಟುಂಬವೊಂದರಲ್ಲಿ ಚತುರ ವಿದ್ಯಾರ್ಥಿಯಾಗಿದ್ದ ತಿಲಕರಿಗೆ ಗಣಿತದಲ್ಲಿ ವಿಶೇಷ ಪ್ರತಿಭೆಯಿತ್ತು. ಆಧುನಿಕ ಕಾಲೇಜು ಶಿಕ್ಷಣ ಪಡೆದುಕೊಂಡ ನವ ಪೀಳಿಗೆಯ ಯುವಕಲರಲ್ಲಿ ತಿಲಕರು ಒಬ್ಬರಾಗಿದ್ದರು. ಪದವಿ ಪಡೆದ ಬಳಿಕ ಪೂಣೆಯ ಖಾಸಗಿ ಶಾಲೆಯೊಂದರಲ್ಲಿ ಗಣಿತ ಶಿಕ್ಷಕರಾಗಿ ಸೇರಿದ ತಿಲಕರು ನಂತರ ಅದನ್ನು ಬಿಟ್ಟು ಪತ್ರಕರ್ತರಾದರು ಪಾಶ್ಚಿಮಾತ್ಯ ಶಿಕ್ಷಣ ಪದ್ಧತಿಯು ಭಾರತೀಯ ಪರಂಪರೆಯನ್ನು ಅವ ಹೇಳಿಸುವಂಥದ್ದು ಹಾಗೂ ಭಾರತದ ವಿದ್ಯಾರ್ಥಿಗಳನ್ನು ಕೀಳುಗೆಳೆಯುವಂಥದ್ದು, ಎಂಬ ನಿರ್ಧಾರಕ್ಕೆ ಬಂದ ಅವರು ಈ ಪದ್ಧತಿಯ ತೀವ್ರ ಟೀಕಾಕಾರಾದರು. ವಿದ್ಯಾರ್ಥಿಗಳಿಗೆ ಒಳ್ಳೆಯ ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂಬ ಉದ್ದೇಶದಿಂದ ಪುಣೆಯಲ್ಲಿ ಡೆಕ್ಕನ್ ಎಜುಕೇಶನ್ ಸೊಸೈಟಿಯನ್ನು ಸ್ಥಾಪಿಸಿದರು.

**ರಾಜಕೀಯ ಜೀವನ** :– ತಿಲಕರು ಸ್ಥಾಪಿಸಿದ 'ಕೇಸರಿ' ಮರಾಠಿ ಪತ್ರಿಕೆಯು ಬಹುಬೇಗ ಜನಸಾಮಾನ್ಯರ ಮನೆಮಾತಾಯಿತು. ಸ್ವಾತಂತ್ರ್ಯವನ್ನು ಅದರಲ್ಲೂ ಮುಖ್ಯವಾಗಿ 1905ರ ಬಂಗಾಳ ವಿಭಜನೆಯ ವಿರೋಧವನ್ನು ಹತ್ತಿಕ್ಕಿದ ಭಾರತದ ನಾಗರೀಕರನ್ನು, ಸಂಸ್ಕೃತಿಯನ್ನು, ಪರಂಪರೆಯನ್ನು ಹೀಯಾಳಿಸುವ ಬ್ರಿಟೀಷ್ ಸಂಸ್ಥೆಯ ತೀವ್ರ ಟೀಕೆಯನ್ನು ಅವರು ಕೇಸರಿಯಲ್ಲಿ ಮಾಡುತ್ತಿದ್ದರು. ಭಾರತೀಯರಿಗೆ ಸ್ವರಾಜ್ಯದ ಹಕ್ಕನ್ನು ಬಿಟ್ಟುಕೊಡಬೇಕೆಂದು ಅವರು ಪ್ರತಿಪಾದಿಸಿದರು. 1890ರ ದಶಕದಲ್ಲಿ ತಿಲಕರು ಕಾಂಗ್ರೆಸ್ ಸೇರಿದರಾದರೂ ಬಹುಬೇಗ ಸ್ವಾತಂತ್ರ್ಯ ಹೋರಾಟದಲ್ಲಿ ಉದಾರೀ–ಸೌಮ್ಯವಾದ ಧೋರಣೆಯ ವಿರೋಧಕರಾದರು. ಗೋಪಾಲಕೃಷ್ಣ ಗೋಖಲೆಯವರ ಸೌಮ್ಯವಾದಿ ನೀತಿಯ ಕಟು ಟೀಕಾಕಾರರಾದರು. ಇದರಲ್ಲಿ ತಿಲಕರಿಗೆ ಬಂಗಾಳದ ಬಿಪಿನ್ ಚಂದ್ರಶೇಖರ್ ಹಾಗೂ ಪಂಜಾಬಿನ ಲಾಲಾ ಲಜಪತ್‌ರಾಯ್ ಬೆಂಬಲವಿತ್ತು. 1907ರಲ್ಲಿ ಸೂರತ್ ಅಧಿವೇಶನದಲ್ಲಿ ಕಾಂಗ್ರೆಸ್ ತಿಲಕ, ಪಾಲ್, ಹಾಗೂ ರಾಯ್ ನೇತೃತ್ವದಲ್ಲಿ "ಗರಂ ದಳ" ಹಾಗು "ನರಾ ದಳ" ಎಂಬ ಇಬ್ಭಾಗವಾಯಿತು.

ರಾಜದ್ರೋಹದ ಆರೋಪದ ಮೇಲೆ 1906ರಲ್ಲಿ ಬಂಧನಕ್ಕೊಳಗಾದ ತಿಲಕರು ತಮ್ಮ ಪರವಾಗಿ ವಕಾಲತ್ತು ವಹಿಸುವಂತೆ ಕೇಳಿಕೊಂಡಿದ್ದ ಯುವ ವಕೀಲ ಮಹಮದ್ ಆಲಿ ಜಿನ್ನಾರನ್ನು ಆದರೂ ಬ್ರಿಟಿಷ್ ನ್ಯಾಯಾಧೀಶರಿಂದ ಅಪರಾಧಿ ಎಂದು ಘೋಷಿಸಲ್ಪಟ್ಟು 1908ರಿಂದ 1914ರವರೆಗೆ ಬರ್ಮಾ ದೇಶದ ಮಂಡಾಲೆಯಲ್ಲಿ ಸೆರೆವಾಸ ಅನುಭವಿಸಿದರು. ಬಿಡುಗಡೆಯಾದ ನಂತರ ತಮ್ಮ ಸಹ–ರಾಷ್ಟ್ರೀಯವಾದಿಗಳನ್ನು ಕೂಡಿಕೊಂಡ ತಿಲಕರು 1916ರಲ್ಲಿ ಕಾಂಗ್ರೆಸ್‌ನ್ನು ಕೂಡಾ ಪುನಃ ಒಟ್ಟುಗೂಡಿಸಿದರು. ಅಖಿಲ ಭಾರತ ಹೋಂ ರೂಲ್ ಲೀಗ್‌ನ್ನು ಸ್ಥಾಪಿಸುವಲ್ಲಿ ಆನಿ ಬೆಸೆಂಟ್ ಮತ್ತು ಮಹಮದ್ ಆಲಿ ಜಿನ್ನರಿಗೆ ಸಹಕಾರ ನೀಡಿದರು. ಅದರ ಮೂಲಕ ಸ್ವಾತತ್ರ್ಯ ಹೋರಾಟ ಶುರು ಮಾಡಿದರು.



**ಸಾಕಮ್ಮ ಎಂ ಸಣ್ಣರ್**
ಬಿ.ಇಡಿ ಪ್ರಶಿಕ್ಷಣಾರ್ಥಿ

# ಸ್ವಾತಂತ್ರ್ಯ ಚಳುವಳಿಗೆ ತಿಲಕರ ಕೊಡುಗೆ

## 1. ಬಾಲ ಗಂಗಾಧರ ತಿಲಕ್ (1856–1920)

ಲೋಕಮಾನ್ಯ ಎಂದೇ ಜನಪ್ರಿಯರಾದ ಬಾಲಗಂಗಾಧರ ತಿಲಕ್ ತೀವ್ರಗಾಮಿಗಳ ಅತ್ಯುತ್ತಮ ನಾಯಕರು ಅವರು ಅಪ್ರತಿಮ ದೇಶಭಕ್ತರು, ಸುಧಾರಕರು ಮತ್ತು ಸ್ವಾತಂತ್ರ್ಯ ಹೋರಾಟಗಾರರು ಆಗಿದ್ದು ನವಭಾರತದ ನಿರ್ಮಾಪಕರಲ್ಲಿ ಒಬ್ಬರಾಗಿದ್ದಾರೆ. ತಿಲಕರು ಜುಲೈ 1856ರಲ್ಲಿ ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಚಿಕಲ ಗ್ರಾಮದಲ್ಲಿ ಜನಿಸಿದರು. ತಂದೆ ರಾಮಚಂದ್ರ ತಿಲಕ ತಾಯಿ ಪಾರ್ವತಿಬಾಯಿ ತಿಲಕರು ಪೂನಾದ ಡಕ್ಕನ್ ಕಾಲೇಜಿನಿಂದ ಕಾನೂನು ಪದವಿ ಪಡೆದು ಡೆಕ್ಕನ್ ಎಜುಕೇಷನ್ ಸೂಸೈಟಿಯ ಸಂಸ್ಥಾಪಕರಾಗಿ ಸೇವೆ ಆರಂಭಿಸಿದರು.

ಸ್ವಾತಂತ್ರ್ಯ ಚಳುವಳಿಗೆ ತಿಲಕರ ಮುದ್ರೆ ಬಲಯುತವಾಗಿಯೇ ಇದ್ದಿತು. ಬಾಲಗಂಗಾಧರ ತಿಲಕ್‌ರವರು ಜನತೆಯಲ್ಲಿದ್ದ ಅಧೈರ್ಯವನ್ನು ಹಾಗೂ ಸೋಮಾರಿತನವನ್ನು ತೊಲಗಿಸಲು ತಿಲಕರು ರಾಷ್ಟ್ರಕ್ಕೆ ಬಂದು ನವ ಚೈತನ್ಯವನ್ನು ಕೊಟ್ಟರು. ವಾಲೆಂಟೈನ ಶಿರೋಲ್‌ರವರ ಪ್ರಕಾರ ಇಂಡಿಯಾ ದೇಶದಲ್ಲಿ ಅಶಾಂತಿ ಮನೋಭಾವನೆಯನ್ನು ಹರಡಿದ ಮುಖ್ಯ ವ್ಯಕ್ತಿಯಿಂದರೇ ತಿಲಕರು ಆದರೆ ಇನ್ನೊಂದು ಅರ್ಥದಲ್ಲಿ ಶಿರೋಲ್‌ರವರು ಹೇಳುವುದು ಸರಿ ದಿಕ್ಕುಕಾಣದ ಅಂಧತೆಯಲ್ಲಿ ಮುಳುಗಿದ್ದ ಭಾರತದ ಜನ ಸಮೂಹಕ್ಕೆ ಒಂದು ಸ್ಪೂರ್ತಿಯನ್ನು ನೀಡಿ ಅವರಿಗೆ ಪ್ರತಿಭಟನಾ ಚೇತನವನ್ನು ಕೊಟ್ಟ ಕೀರ್ತಿ ತಿಲಕರಿಗೆ ಸಲ್ಲುತ್ತದೆ, ಎಂದು ಅವರು ತಿಳಿಸಿದ್ದಾರೆ.

ಪ್ರಗತಿಯು ಅನುಕರಣೆಯಿಂದ ಸಾಧ್ಯವಿಲ್ಲ ಜೀವನವನ್ನು ಸರಿಯಾದ ರೀತಿಯಲ್ಲಿ ಹಾಗೂ ಶಿಸ್ತಿನಿಂದ ಜೀವನ ನಡೆಸಲು ಜೀವನದ ಉದ್ದೇಶಗಳು ಆದರ್ಶಭರಿತವಾಗಿರಬೇಕು. ಇತಿಹಾಸವು ನಮ್ಮ ನಾಗರೀಕತೆ ಹಾಗೂ ಸಂಸ್ಕೃತಿಯನ್ನು ತಿಳಿಸಿಕೊಡುವುದು ಮಾತ್ರವಲ್ಲದೆ, ನಮ್ಮ ಪಾರಂಪರ್ಯವಾಗಿ ಬಂದ ಮೌಲ್ಯಗಳಿಗೆ ಕಲೆಯನ್ನು ತುಂಬುತ್ತದೆ. ತನ್ಮೂಲಕ ನಮ್ಮ ಜೀವನವನ್ನು ನಮ್ಮ ಭವಿಷ್ಯವನ್ನು ನಾವೇ ನಿರ್ಣಯಿಸಿಕೊಳ್ಳುವ ಸ್ವತಂತ್ರದ ವಾತಾವರಣ ಕಲ್ಪಿಸಿಕೊಡುತ್ತದೆ. ಹೀಗೆಂದ ಮಾತ್ರಕ್ಕೆ ಪರಕೀಯರಲ್ಲಿ ಸದ್ಗುಣಗಳನ್ನು ಹಾಗೂ ಸದ್ವಿಚಾರಗಳನ್ನು ಅಲ್ಲಗಳೆಯಬಾರದು. ಬ್ರಿಟೀಷ್ ನೌಕರಶಾಹಿಯ ವಿರುದ್ಧ ಹೋರಾಟ ನಡೆಸಿದರೂ, ಬ್ರಿಟೀಷ್ ಜನರ ಉದಾತ್ತ ಭಾವನೆಗಳನ್ನು ಹಾಗೂ ತತ್ವಗಳನ್ನು ಭಾರತವು ಅಂಗೀಕರಿಸಿತು ಆಮೂಲಕ ಭಾರತ ರಾಷ್ಟ್ರೀಯ ಆಂದೋಲನಕ್ಕೆ ಒಂದು ವಿಚಾರಪೂರಿತ ಚಿಂತನೆಯನ್ನು ವಿದೇಶಿ ಸರ್ಕಾರ ಒದಗಿಸಿಕೊಟ್ಟಂತಾಯಿತು.

ತಿಲಕರು ರಾಜಕೀಯಕ್ಕೆ ಬರುವುದಕ್ಕೆ ಮುಂಚೆ ಕಾಂಗ್ರೆಸ್ ಪಕ್ಷವು ಕೇವಲ ಸಣ್ಣ ಪುಟ್ಟ ರಿಯಾಯಿತಿಯನ್ನು ಪಡೆಯುವುದರಲ್ಲಿ ಆಸಕ್ತಿ ಹೊಂದಿತ್ತು ಅದು ಒಂದು ಡಿಬೇಟಿಂಗ್ ಕ್ಲಬ್ ಆಗಿದ್ದಿತು ಅದರ ಸದಸ್ಯರಲ್ಲಿ ಬಹುಮಂದಿ ಬ್ರಿಟಿಷ್ ಅಧಿಕಾರಗಳೇ ಆಗಿದ್ದರು. ಅದನ್ನು ಒಂದು ಪ್ರಚಂಡ ಹಾಗೂ ಉಜ್ವಲವಾದ ರಾಷ್ಟ್ರೀಯ ಆಂದೋಲನದ ಸಾಧನವನ್ನಾಗಿ ಮಾಡಿದ ಕೀರ್ತಿ ತಿಲಕರಿಗೆ ಸಲ್ಲುತ್ತದೆ. ಗಾಂಧೀಜಿ ಮತ್ತು ಸರ್ದಾರ್ ಪಟೇಲರು ತಿಳಿಸಿದಂತಹ ಶಿಸ್ತುಳ್ಳ ಅಹಿಂಸಾತ್ಮಕ ಕಾರ್ಯಕ್ರಮಕ್ಕೆ ಅವಕಾಶ ಮಾಡಿಕೊಟ್ಟರು.

ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿ ಬಂದ ನಂತರ ದುಮುಕಿದ ಚಳುವಳಿಗಳಲ್ಲಿ ಸ್ವದೇಶಿ ಸ್ವರಾಜ್ಯ ಚಳುವಳಿ ಪ್ರಮುಖವಾದದ್ದು. ಇದರಲ್ಲಿ ತಿಲಕರ ಪಾತ್ರ ಅತ್ಯೋನ್ನತವಾದದು. 'ರಾಜಕೀಯವಾಗಿ ಸ್ವಾತಂತ್ರ್ಯವನ್ನು ಪಡೆಯುವುದು ಒಂದು ಮುಖವಾಡವಾದರೆ, ರಾಷ್ಟ್ರವನ್ನು ಕಟ್ಟುವುದು ಮತ್ತೊಂದು ಮುಖ'. ಅದಕ್ಕೋಸ್ಕರ ಒಂದು ರಚನಾತ್ಮಕ ಕಾರ್ಯಕ್ರಮವನ್ನು 1920ರಲ್ಲಿ ತಿಲಕರು ಕೊಟ್ಟಿದ್ದರು.

ಕೇಸರಿ ಮತ್ತು ಮರಾಠ ಎಂಬೆರಡು ಪತ್ರಿಕೆಗಳನ್ನು ಆರಂಭಿಸಿ ಜನತೆಗೆ ರಾಜಕೀಯ ಶಿಕ್ಷಣ ನೀಡಿದರು. ಗೋಹತ್ಯೆ ನಿಷೇಧ, ಗಣೇಶ, ಶಿವಾಜಿ ಹಬ್ಬಗಳ ಆಚರಣೆ ಆರಂಭಿಸಿ ಜನರಲ್ಲಿ ಸ್ವಾತಂತ್ರ್ಯಸ್ಫೂರ್ತಿ, ರಾಷ್ಟ್ರಭಕ್ತಿ ತುಂಬಿದರು. 'ಸ್ವರಾಜ್ಯ ನನ್ನ ಆಜನ್ಮ ಸಿದ್ಧಹಕ್ಕು ಅದನ್ನು ನಾನು ಪಡೆದೇ ತಿರುತ್ತೇನೆ' ಎಂದು ತಿಲಕರು ಘೋಷಿಸಿದರು. ತಿಲಕರು ಗೀತರಹಸ್ಯ ಎಂಬ ಕೃತಿಯನ್ನು ರಚಿಸಿದರು. 1920 ಆಗಸ್ಟ್ 1ರಂದು ನಿಧನರಾದರು. ತಿಲಕರನ್ನು ಭಾರತದ ರಾಜಕೀಯ ಶಾಂತಿಜನಕ ಮಹಾರಾಷ್ಟ್ರದ ಅನಭಿಷಿಕ್ತ ದೊರೆ ಎಂದು ಕರೆಯಲಾಗಿದೆ.

## 2. **ನೆಹರು ಮತ್ತು ಜಾತ್ಯಾತೀತವಾದ**

ಜವಹಾರ್‌ಲಾಲ್ ನೆಹರುರವರು ಮುಖ್ಯ ಪ್ರಯತ್ನದಿಂದಾಗಿ ಭಾರತ ರಾಷ್ಟ್ರವು ಜಾತ್ಯತೀತ ರಾಷ್ಟ್ರವಾಗಿ ಇಪ್ಪತ್ತನೇ ಶತಮಾನದ ಮಧ್ಯಭಾಗದಲ್ಲಿ ಅಸ್ತಿತ್ವಕ್ಕೆ ಬಂದಿತು. ಸ್ವಾತಂತ್ರ್ಯ ಪೂರ್ವದ ಬಹಳಷ್ಟು ಹಿಂದಿನ ದಿನಗಳಿಂದಲೇ ಅವರು ಭಾರತದ ರಾಜಕೀಯಕ್ಕಾಗಿ ಜಾತ್ಯಾತೀತತೆಯ ತಳಹದಿಯ ಅಭಿವೃದ್ಧಿಯಲ್ಲಿ ಗಣ್ಯನಾಯಕರಾಗಿ ಪಾತ್ರ ನಿರ್ವಹಿಸಿದ್ದರು. ಅವರು ಜಾತ್ಯಾತೀತವಾದ ರಾಷ್ಟ್ರಕ್ಕೆ ಏಕತೆ ಮತ್ತು ಪ್ರಗತಿಯ ಹಿತಾಸಕ್ತಿಗಳನ್ನು ವೃದ್ಧಿಸುವಲ್ಲಿ ಅತ್ಯವಶ್ಯಕ ಸಾಮಾಜಿಕ ಆದರ್ಶ ಎಂದರು. ಅವರು ತಮಗೆ ಅವಕಾಶ ಲಭಿಸಿದಾಗಲೆಲ್ಲ ಧರ್ಮ ಮತ್ತು ರಾಜಕೀಯಗಳೆರೆಡರ ಮಿಶ್ರಣದ ಅಪಾಯಗಳನ್ನು ಜನರ ಮನಸ್ಸಿಗೆ ನಾಟುವಂತೆ ತಿಳಿಸುತ್ತಿದ್ದರು. ಕೋಮುವಾದ ಎಂಬುದು ಕೇವಲ ಸಮಾಜದ ಬಲಿಷ್ಠವಾದ ರಚನೆಯನ್ನು ಮಾತ್ರ ದುರ್ಬಲಗೊಳಿಸುವುದಷ್ಟೇ ಅಲ್ಲದೇ ಸಮಾಜದ ಇಡೀ ಅಸ್ತಿತ್ವಕ್ಕೆ ಧಕ್ಕೆಯನ್ನುಂಟು ಮಾಡುತ್ತದೆ. ನೆಹರುರವರು ಜಾತ್ಯಾತೀತವಾದ ಅಧಿಕೃತವಾಗಿ ಮೊಟ್ಟ ಮೊದಲು ವ್ಯಕ್ತವಾದದು 1931ರ ಕರಾಚಿ ಕಾಂಗ್ರೆಸ್ ಅಧಿವೇಶನದಲ್ಲಿ. ಈ ಅಧಿವೇಶನದಲ್ಲಿ ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು ಎಂಬ ವಿಷಯದ ಬಗ್ಗೆಯೇ ಅವರು ಮಂಡಿಸಿದ ನಿರ್ಣಯ ಅಂಗೀಕರಿಸಲ್ಪಟ್ಟಿತು. ಆ ನಿರ್ಣಯ ಹೀಗೆ ಇದೆ. 'ಧರ್ಮಗಳ ಬಗ್ಗೆ ರಾಜ್ಯ ತಟಸ್ಥತೆ ಹೊಂದಿರಬೇಕು. ಜಾತ್ಯಾತೀತ ರಾಜ್ಯದಲ್ಲಿ ವ್ಯಕ್ತಿ ತನ್ನ ಜೀವನದಲ್ಲಿ ಧರ್ಮವನ್ನು ತ್ಯಜೀಸುವುದು ಎಂದರ್ಥವಲ್ಲ. ಅದರ ಅರ್ಥ ಧರ್ಮದಿಂದ ರಾಜ್ಯ ಪ್ರತ್ಯೇಕವಾಗಿರಬೇಕು. ಬಲಿಷ್ಠವಾದ ಜಾತ್ಯಾತೀತತೆಯ ಆಧಾರದ ಮೇಲೆ ಸಿಮೀತವಾಗಿರುವ ರಾಷ್ಟ್ರದಲ್ಲಿ ಮಾತ್ರ ವಿವಿಧ ವೈವಿಧ್ಯಮಯ ಗುಂಪುಗಳಲ್ಲಿ ಧಾರ್ಮಿಕ ಸಾಮರಸ್ಯತೆಯನ್ನು ಹಾಗೂ ಸಾಮಾಜಿಕ ವೈವಿಧ್ಯಮಯವಾದ ಧರ್ಮಗಳು ಪಂಥಗಳು ಮತ್ತು ನಂಬಿಕೆಯಿಂದ ವಿಭಜಿತವಾದ ಸಮುದಾಯವನ್ನು ಜಾತ್ಯಾತೀತ ರಾಜ್ಯ ಮಾತ್ರ ಉತ್ತಮವಾಗಿ ಸೇವೆ ಸಲ್ಲಿಸಬಹುದು ಎಂದು ನಂಬಿದ್ದರು.

ಭಾರತದ ಸಂವಿಧಾನ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಎಲ್ಲಾ ವ್ಯಕ್ತಿಗಳಿಗೂ ಕೊಟ್ಟಿದೆ. ಭಾರತದಲ್ಲಿ ಎಲ್ಲರಿಗೂ ಏಕರೂಪ ಸಂಹಿತೆ (44) ಸೃಷ್ಠಿಯನ್ನು ಹೊಂದಿದ್ದು ಭಾರತದ ಸಂವಿಧಾನದ ರಾಜ್ಯ ನಿರ್ದೇಶಕ ತತ್ವದ ಬಗ್ಗೆ ಆಸಕ್ತಿ ಹೊಂದಿದ್ದರು. ರಾಷ್ಟ್ರದ ಏಕತೆಯನ್ನು ಕಾಪಾಡಿಕೊಂಡು ಬರಲು ಮತ್ತು ಆ ಮೂಲಕ ವ್ಯವಸ್ಥಿತ ಪ್ರಗತಿಯನ್ನು ಸಾಧಿಸಲು ಜಾತ್ಯಾತೀತತೆಯ ಮಾರ್ಗ ಅತ್ಯವಶ್ಯಕವಾದದ್ದೆಂದು ಪರಿಗಣಿಸಿದ್ದರು.



**ಮಾಲಾ ಎಮ್**
ಬಿ.ಇಡಿ ಪ್ರಶಿಕ್ಷಣಾರ್ಥಿ

# "One Nation One Voter ID"

ಕೋವಿಡ್–19 ರೋಗದ ಕಾರಣಕ್ಕಾಗಿ 65 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಅಂಚೆ ಮತದಾನದ ಮೂಲಕ ಮತ ಚಲಾಯಿಸುವ ಅವಕಾಶ ಒದಗಿಸಲು 'ಭಾರತೀಯ ಚುನಾವಣಾ ಆಯೋಗವು' "ಒನ್ ನೇಷನ್ ಒನ್ ವೋಟರ್ ಐಡಿ "ಯೋಜನೆ ಜಾರಿಗೆ ತರಲಿದೆ. ಕೊರೊನಾ ರೋಗದಿಂದಾಗಿ 65 ವರ್ಷ ಮೆಲ್ಪಟ್ಟ ಹಿರಿಯ ನಾರಿಗಕರಿಗೆ ಹೆಚ್ಚಿನ ಅಪಾಯಗಳಾಗುವ ಸಾಧ್ಯತೆಗಳಿವೆ. ಇಲ್ಲಿಯವರೆಗೆ ಈ ರೀತಿಯ ವಿಧಾನವು ಕೇವಲ ಅಂಗವಿಕಲರಿಗೆ ಮತ್ತು 80 ವರ್ಷ ಮೇಲ್ಪಟ್ಟವರಿಗೆ ಮಾತ್ರ ಲಭ್ಯವಿತ್ತು ಆದರೆ ಈಗ ವಲಸೆ ಕಾರ್ಮಿಕರಿಗೂ ಈ ವಿಧಾನವು ಅನ್ವಯವಾಗುವಂತೆ ಯೋಜನೆ ಮಾಡಲಾಗಿದೆ.

**ಕಾರಣಗಳು** :

- 2017 ರ ಆರ್ಥಿಕ ಸಮೀಕ್ಷೆ ಪ್ರಕಾರ ಭಾರತದ ವಲಸೆ ಕಾರ್ಮಿಕರ ಸಂಖ್ಯೆ ಸುಮಾರು 13.9 ಕೋಟಿ ಇದ್ದು, ಭಾರತದ ಒಟ್ಟು ಕಾರ್ಮಿಕ ಬಲದ ಮೂರನೆ ಒಂದು ಭಾಗವಾಗಿದೆ, ಅವರು ಸಾಮಾನ್ಯವಾಗಿ ಮತ ಚಲಾಯಿಸಲಾಗುತ್ತಿಲ್ಲ.
- ವಲಸೆ ಕಾರ್ಮಿಕರು ಚುನಾವಣಾ ದಿನದಂದು ತಮ್ಮ ಮನೆಗಳಿಗೆ ತೆರಳಲು ಸಾಧ್ಯವಾಗದ ಕಾರಣ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಲು ಸಾಧ್ಯವಾಗುತ್ತಿಲ್ಲ.
- ಬಹಳಷ್ಟು ವಲಸೆ ಕಾರ್ಮಿಕರು, ಅರೆ–ನಿರಾಕರಿಸಲ್ಪಟ್ಟ, ಹಾಗೂ ಮರೆ ಮಾಚಿದ ಮತದಾರರಾಗಿದ್ದಾರೆ.
- ವಲಸೆ ಕಾರ್ಮಿಕರಿಗೆ ತಮ್ಮ ವಾಸಸ್ಥಳದ ಪುರಾವೆಗಳನ್ನು ಒದಗಿಸಲು ಸಾಧ್ಯವಾಗದೇ ಉದ್ಯೋಗ ಸ್ಥಳದಲ್ಲಿ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ದಾಖಲು ಮಾಡಿಕೊಳ್ಳಲಾಗುತ್ತಿಲ್ಲ.
- ಈ ಗುಂಪಿನವರು ಸೂಕ್ತವಾದ ವೋಟ್ ಬ್ಯಾಂಕ್‌ನ್ನು ಹೊಂದಿರುವುದಿಲ್ಲ.
- ಮತ ಚಲಾಯಿಸಲು ಅನುಕೂಲವಾಗುವಂತಿದ್ದರೆ ತಮ್ಮ ತಮ್ಮ ಮನೆಗಳಿಗೆ ತೆರಳಿ ಮತ ಚಲಾಯಿಸುತಾ ್ತರೆ. ಈ ಯೋಜನೆಯ ಪ ್ರಕ್ರಿಯೆ. ಮತ ಚಲಾಯಿಸುವ ಅರ್ಹತೆಯನ್ನು ಹೊಂದಿರುವ ಪ್ರತಿಯೊಬ್ಬ ಭಾರತೀಯನ ಮತದಾನದ ಬಗ್ಗೆ 'ಭಾರತೀಯ ಚುನಾವಣಾ ಆಯೋಗವು' ಖಚಿತಪಡಿಸಿಕೊಳ್ಳಬೇಕು. ದೇಶದ ಯಾವುದೇ ಭಾಗದಲ್ಲಿದ್ದರೂ ಮತದಾರರು ತಮ್ಮ ಮತ ಚಲಾಯಿಸಲು ಡಿಜಿಟಲ್ ಮಾದರಿಯ ವಿಧಾನಕ್ಕೆ ಅನುವು ಮಾಡಿ ಕೊಡಬೇಕು. ಆಧಾರ–ಜೋಡನೆ (ಲಿಂಕ್) ಯ 'ಮತದಾರರ ಗುರುತಿನ ಚೀಟಿ' ಯನ್ನು ಪರೀಕ್ಷಿಸಲಾಗುವುದು ಎಂದು ಭಾರತೀಯ ಚುನಾವಣಾ ಆಯೋಗವು ಹೇಳಿದೆ. ವಲಸೆ ಕಾರ್ಮಿಕರ ಮತದಾನಕ್ಕೆ ಅನುಕೂಲವಾಗುವಂತೆ ಕೇಂದ್ರ ಚುನಾವಣಾ ಆಯೋಗವು ಜಿಲ್ಲಾ ್ಲಧಿಕಾರಿಗಳಿಂದ ಸಮಗ್ರ ಮಾಹಿತಿಯನ್ನು ಪಡೆದುಕೊಂಡು ಗಣನೀಯ ಪ್ರಮಾಣದ ಕ್ರಮಗಳನ್ನು ಕೈಗೊಳ್ಳಬಹುದು. ಸಧ್ಯ ಅಸ್ತಿತ್ವದಲ್ಲಿರುವ ಮತದಾರರ ಗುರುತಿನ ವಿಳಾಸ ಮತ್ತು ತಾತ್ಕಾಲಿಕ ಸ್ಥಳದ ಕಾಲಾವಕಾಶವನ್ನು ಆಧರಿಸಿ ತಾವಿರುವ ಕೆಲಸದ ಸ್ಥಳದಿಂದಲೇ ನೇರವಾಗಿ ಮತವನ್ನು ಚಲಾಯಿಸಬಹುದು.

**ಈ ಯೋಜನೆಯ ಪ ್ರಯೋಜನಗಳು** :

- ಮತದಾನದ ವೆಚ್ಚ, ಮತದಾರರ ವೆಚ್ಚ ಹಾಗೂ ಪಕ್ಷದ ವೆಚ್ಚಗಳನ್ನು ಕಡಿಮೆ ಮಾಡುವುದು.

- ಸಾರ್ವಜನಿಕ ಹಣವನ್ನು ಉಳಿಸುತ್ತದೆ ಹಾಗೂ ಆಡಳಿತಾತ್ಮಕ ಹಾಗೂ ಭದ್ರತಾ ಪಡೆಗಳ ಮೇಲಿನ ಹೊರೆಯನ್ನು ಕಡಿಮೆ ಮಾಡುತ್ತದೆ. ಸರ್ಕಾರದ ನೀತಿಗಳನ್ನು ಸಮಯೋಚಿತವಾಗಿ ಅನುಷ್ಠಾನಗೋಳಿಸುವುದು.
- ಆಡಳಿತ ಯಂತ್ರದ ಅಭಿವೃದ್ಧಿ ಚಟುವಟಿಕೆಗಳು ಕಂಡು ಬರುತ್ತವೆ.
- ಮತದಾರರು ಸರ್ಕಾರದ ನೀತಿಗಳು ಹಾಗೂ ಕಾರ್ಯಕ್ರಮಗಳ,ನಿರ್ಣಯವನ್ನು ಮಾಡಬಹುದು .ಮತದಾರರು ರಾಜಕೀಯ ಪಕ್ಷಗಳ ಮೇಲೆ ಭರವಸೆಯನ್ನು ಹೊಂದಬಹುದು. " ವಲಸೆ ಕಾರ್ಮಿಕರು ಮತ್ತು ಅವರ ಕುಟುಂಬ ಸದಸ್ಯರಿಗೆ ದೇಶದ ಯಾವುದೇ ನ್ಯಾಯ ಬೆಲೆ ಅಂಗಡಿಯಿಂದ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಯೋಜನೆ ಪಡೆಯಲು "ಒನ್ ನೇಶನ್ ಒನ್ ರೇಶನ್ ಕಾರ್ಡ್" ಯೋಜನೆ ಇರುವಂತೆ ನಾಗರಿಕರ ಹಾಗೂ ವಲಸೆ ಕಾರ್ಮಿಕರ ಸ್ಥಳೀಯ ಮತದಾನದ ಹಕ್ಕನ್ನು ಖಚಿತಪಡಿಸಿಕೊಳ್ಳಲು ಮತ್ತು ಮರೆಮಾಚಿದ ವಲಸೆ ಮತದಾರರಿಗೆ ಅಧಿಕಾರ ದೊರಯುವಂತೆ ಮಾಡಲು "ಒನ್ ನೇಶನ್ ಒನ್ ವೋಟರ್ ಐಡಿ"ಯೋಜನೆ ಜಾರಿಗೋಳಿಸಲಾಗಿದೆ." "ಮತದಾನವನ್ನು ಕೇವಲ ನಾಗರಿಕನ ಕರ್ತವ್ಯವಾಗಿ ನೋಡದೆ ಅದು ನಾಗರಿಕನ ಹಕ್ಕನ್ನಾಗಿ ನೋಡಬೇಕು" ಭಾರತೀಯ ಚುನವಣಾ ಆಯೋಗ : ವಿಧಿ 324. ಸ್ಥಾಪನೆ : ಜನೇವರಿ 25, 1950

| | |
|---|---|
| **ಕೇಂದ್ರ ಕಚೇರಿ** | : ನವ ದೆಹಲಿ |
| ಪ್ರಸ್ತುತ ಮುಖ್ಯ ಚುನಾವಣಾ ಆಯುಕ್ತರು | : ಸುನೀಲ ಅರೋರಾ |
| ಕಾರ್ಯ | : ಚುನಾವಣಾ ಆಯೋಗವು ಸಂಸತ್ತಿನ ,ರಾಜ್ಯಶಾಸನ ಸಭೆಗಳ,ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿಯವರ ಚುನಾವಣೆಗಳ ಮೇಲ್ವಿಚಾರಣೆ,ನಿರ್ದೇಶನ ಹಾಗೂ ನಿಯಂತ್ರಣಾ ಅಧಿಕಾರವನ್ನು ಹೊಂದಿದೆ. |
| ನೇಮಕ | :ಚುನಾವಣಾ ಆಯೋಗದ ಸದಸ್ಯರನ್ನು ರಾಷ್ಟ್ರಪತಿಯವರು ಮಂತ್ರಿ ಮಂಡಲದ ಸಲಹೆ ಮೇರೆಗೆ ನೇಮಕ ಮಾಡುತ್ತಾರೆ. |
| ಅಧಿಕಾರ ಅವಧಿ | : 6 ವರ್ಷಗಳು |



**ವಿಜಯ ಕುಮಾರ**
ಬಿ.ಇಡಿ ಪ್ರಶಿಕ್ಷಣಾರ್ಥಿ

## ಜ್ಞಾನಿ ಪರಮಹಂಸರು

ಭಾರತದ ಜ್ಞಾನಿಗಳ ಪಟ್ಟಿಯಲ್ಲಿಉನ್ನತ ಸ್ಥಾನದಲ್ಲಿರುವವರುರಾಮಕೃಷ್ಣ ಪರಮಹಂಸರು. ಇವರು ಮಾರ್ಚ್ 18, 1936ರಂದುಜನಿಸಿದರು. ಕಲ್ಕತ್ತೆಯಿಂದ ಐವತ್ತು ಕಿಲೋಮೀಟರ್ ದೂರದಹೂಗ್ಲಿಜಿಲ್ಲೆಯಕಮರಪುಕುರಎಂಬ ಹಳ್ಳಿಯಲ್ಲಿ ಜನಿಸಿದ್ದರು. ಇವರ ತಂದೆ ಚಟ್ಟೋಪಾಧ್ಯಾಯ, ತಾಯಿ ಚಂದ್ರಮಣಿದೇವಿ.

ಪರಮಹಂಸರುಚಿಕ್ಕವಯಸ್ಸಿನಲ್ಲಿತಂದೆಯನ್ನು ಕಳೆದುಕೊಂಡಿದ್ದರು. ಇವರು ಬ್ರಾಹ್ಮಣ ಕುಟುಂಬದವರಾಗಿದ್ದುಬೇರೆ ಜಾತಿಯವರುಮನೆಯಲ್ಲಿ ಬೆಳೆಯುವ ಪ್ರಸಂಗ ನಡೆಯಿತು. ಮುಂದೆ ಅಣ್ಣರಾಮಕುಮಾರನುರಾಮಕೃಷ್ಣನಿಗೆಉಪನಯನ ಮಾಡಿದರು. ಆ ಸಮಯದಲ್ಲಿತಮ್ಮನ್ನುಚಿಕ್ಕವಯಸ್ಸಿನಲ್ಲಿಸಲುಹಿದ "ಧನೀ" ಎಂಬ ಹೆಸರಿನಕೆಲಸದವಳಿಂದಭಿಕ್ಷೆಯನ್ನು ಸ್ವೀಕರಿಸಿದರು. ಅವರು ಅತ್ಯುತ್ತಮ ಸ್ವಭಾವದವರು. ಪರಮಹಂಸರುಸಹೋದರರಾಮ ಕುಮಾರರುಬಂದು. ಸಂಸ್ಕೃತ ಕಲಿತುಕೋಎಂದು ಕೋರಿದರು. ಪರಮಹಂಸರುಅತ್ತ ತಲೆಯನ್ನು ಹಾಕಿರಲಿಲ್ಲ. ದೇವರುತನಗೆ ನೇರವಾಗಿ ನೀಡಿದ್ದವಿದ್ಯೆಯಾಕೋ ಅವರ ಮನಸ್ಸಿಗೆ ಒಪ್ಪುತ್ತಿರಲಿಲ್ಲ. ಆದರೆಅವರ ದೇವರ ಪೂಜೆ ಮಾತ್ರಅವ್ಯಾಹತವಾಗಿನಡೆಯುತ್ತಿತ್ತು. ಅವರ ಪೂಜೆತುಂಬಾ ಶ್ರದ್ಧೆಯಿಂದಭಕ್ತಿ ಪೂರ್ಣವಾಗಿ ನಡೆಯುತ್ತಿತ್ತು.

ರಾಮಕೃಷ್ಣ ಪರಮಹಂಸರುಬಾಲ್ಯಕಾಲದಿಂದಲೂಬಹಳ ವಿಶಿಷ್ಟಸ್ವಭಾವದವರುಅವರು ಭಾವಪೂರಿತವಾಗಿಭಜನೆಮಾಡುತ್ತಾ, ಒಂದೊಂದು ಸಂದರ್ಭದಲ್ಲಿ ಭಾವಸಮಾದಿಸ್ತರಾಗಿ, ಆಧ್ಯಾತ್ಮ ಆನಂದದಲ್ಲಿಮುಳುಗಿ ತೇಲಾಡುತ್ತಿದ್ದರು. ಈ ಸಂದರ್ಭದಲ್ಲಿ ಅವರಿಗೆದೇಹದ ಮೇಲೆ ಪರಿವೆಯೇ ಇರುತ್ತಿರಲಿಲ್ಲ. ಆರಾಧ್ಯ ದೈವಶಿವ. ಚಿಕ್ಕವರಿದ್ದಾಗಒಂದು ಬಾರಿಅವರ ಊರಿನಲ್ಲಿಶಿವನ ಕುರಿತುನಾಟಕ ಮಾಡುತ್ತಿದ್ದರು. ಆದರೆ ನಾಟಕದಲ್ಲಿಶಿವನ ಪಾತ್ರದಾರಿನಾಪತ್ತೆಯಾಗಿದ್ದಾನು. ಆಗ ರಾಮಕೃಷ್ಣರುಶಿವನ ಪಾತ್ರ ನಿರ್ವಹಿಸಿಯಶಸ್ವಿಯಾಗಿದ್ದರು. ಆ ಸಂದರ್ಭದಲ್ಲಿಶಿವನ ಪಾತ್ರದಲ್ಲಿಭಾವಪೂರ್ವತೆ ಹೊಂದಿಸಮಾಧಿಸ್ತರಾಗಿದ್ದರು.

ರಾಮಕೃಷ್ಣ ಪರಮಹಂಸರುಕಳೆದ ಮಾತೆಯವಿಗ್ರಹವನ್ನು ಪೂಜಿಸುತ್ತಿದ್ದರುಅವರ ಪೂಜೆ ನಿರ್ದಿಷ್ಟ ವೇಳೆ ಎಂಬುದೇ ಇರಲಿಲ್ಲಹಗಲಿರಲಿರಾತ್ರಿ ಇರಲಿಅವರು ಮಾತ್ರ ತನ್ಮಯರಾಗಿ ಪೂಜಿಸುತ್ತಿದ್ದರು. ಅವರ ಪೂಜೆಗೆ ಮೆಚ್ಚಿಯೆದೇವಿಯು ಪ್ರತ್ಯಕ್ಷರಾಗುತ್ತಿದ್ದಳಂತೆ. ಅವರ ಜೊತೆಗೆ ದೇವಿಯುಮುಕ್ತವಾಗಿ ಸಂಭಾಷಣೆ ಮಾಡುತ್ತಿದ್ದಳು. ಇದನ್ನು ಕಂಡ ಜನರುರಾಮಕೃಷ್ಣರುಹುಚ್ಚರೆಂದುಕರೆಯುತ್ತಿದ್ದರು.ಈವಿಚಿತ್ರಗಳನ್ನುಅವರಅಣ್ಣರಾಮ ಕುಮಾರರಿಗೆತಿಳಿಸಿದಾಗಅವರು ಕೂಡಲೇರಾಮಕೃಷ್ಣರನ್ನುಮನೋವೈದ್ಯರಬಳಿ ಕರೆದುಕೊಂಡು ಹೋಗಿಚಿಕಿತ್ಸೆಯನ್ನು ಕೊಡಿಸಿದರು. ಆದರೆ ಇದರಿಂದ ಯಾವ ಪ್ರಯೋಜನವೂ ಆಗಲಿಲ್ಲ.ಲೌಕಿಕವಿಚಾರದಲ್ಲಿಆಸಕ್ತಿ ಇಲ್ಲದವನಿಗೆಮದುವೆ ಮಾಡುವುದಾದರೂ ಹೇಗೆಎಂಬ ತೊಳಲಾಟದಲ್ಲಿಇರುವವರಿಗೆರಾಮಕೃಷ್ಣರ ಉಪಾಯವನ್ನು ತಿಳಿಸಿದರು. ನನ್ನ ಪತ್ನಿ ಆಗುವವಳುಜಯರಾಮ ವಾಟಿ ಇರುವಳು. ಅವಳ ಹೆಸರು ಶಾರದೆ.ಅವಳ ತಂದೆ ಹೆಸರುರಾಮಚಂದ್ರ ಚಟ್ಟೋಪಾದ್ಯಾಯಎಂದು ತಿಳಿಸಿದರು. ಅದರಂತೆ ಅವರ ಅಣ್ಣ ವಿವಾಹವನ್ನು ನೆರವೇರಿಸಿದರು. ಶಾರದ ಅವರು ಕೂಡಲೌಕಿಕಬದುಕನ್ನುತಿರಸ್ಕರಿಸಿದಳುಈ ಸಂಗತಿಯಿಂದರಾಮಕೃಷ್ಣರುತುಂಬಾ ಖುಷಿಯಾಗಿದ್ದರು.

ರಾಮಕೃಷ್ಣರುಸರ್ವಸಮಾನತೆಸರ್ವ ಧರ್ಮಗಳನ್ನುಸಮಾನ ರೀತಿಯಿಂದಲೇಕಾಣುತ್ತಿದ್ದರು. ಬೇರೆ ಧರ್ಮಗಳಸಾರವನ್ನು ಅರಿತಿದ್ದರು. ಅವರು ಉಪದೇಶವನ್ನು ಕೇಳಿಜಗತ್ತಿನ ಮೂಲೆ ಮೂಲೆಗಳಿಂದಜನರು ಹಾತೊರೆದುಬರುತ್ತಿದ್ದಭಕ್ತರು ರಾಮಕೃಷ್ಣರಿಗೆ"ಪಂಡಿತ"ಎಂಬ ಬಿರುದನ್ನು ನೀಡಿದರು. ಇದೇ ಸಂದರ್ಭದಲ್ಲಿಅವರುಪ್ರತಿನಿತ್ಯದೇವಿಯಬಳಿಬಂದುದೀನರಾಗಿ ಬೇಡಿಕೊಳ್ಳುತ್ತಿದ್ದರು. ತಾಯಿ ನನಗೆ ಒಬ್ಬಸಮರ್ಥ ಶಿಷ್ಯನನ್ನುಕರುಣಿಸು. ನನ್ನನ್ನುಈ ಬಂಧನದಿಂದಮುಕ್ತಗೊಳಿಸುಎಂದುತೀವ್ರಆರ್ತತೆಯಿಂದಕೋರಿಕೊಳ್ಳುತ್ತಿದ್ದರೂಒಮ್ಮೆ ನರೇಂದ್ರನನ್ನುಕಂಡಕೂಡಲೆತಾನು ಹುಡುಕುತ್ತಿರುವಶಿಷ್ಯಆಡಿದನೆಂದುರಾಮಕೃಷ್ಣರುತೀವ್ರವಾಗಿ ಅರಿತುಕೊಂಡರು.ನರೇಂದ್ರನಮೂಲಕತನ್ನ ಆಸೆ–ಆಕಾಂಕ್ಷೆಗಳನ್ನುಪೂರೈಸಿಕೊಳ್ಳಲುನಿಶ್ಚಯಿಸಿದನು. ಅಲ್ಲಿಂದನರೇಂದ್ರಹಾಗೂರಾಮಕೃಷ್ಣರಗುರು–ಶಿಷ್ಯತ್ವದ ಸಂಬಂಧ ಆರಂಭವಾಯಿತು.ಒಟ್ಟಾರೆಒಬ್ಬ ಉತ್ತಮ ವ್ಯಕ್ತಿಅಥವಾಗುರುಭವಿಷ್ಯದ ಬೆಳಕಿಗೆಕಾರಣರಾಗುತ್ತಾರೆಎಂದರೆತಪ್ಪಾಗಲಾರದು.



**ಪವಿತ್ರಾ ಎಂ.**
ಬಿ.ಇಡಿ ಪ್ರಶಿಕ್ಷಣಾರ್ಥಿ

# Human Rights Day




Human Rights Day is observed each year on December 10 since the United Nations General Assembly adopted the Universal Declaration of Human Rights on 10 December 1948, the first global document which outlined human rights. The Declaration established a set of common basic values both with regard to the view of human beings and to the relationship between the state and the individual. It also set standards for human rights, which take precedence over political, economic, cultural and religious differences.Human rights are rights that states, through international agreements, must guarantee individual people. These rights serve to limit the state's power over the individual.

The theme of Human Rights Day 2020 is to "Recover Better - Stand Up for Human Rights". This chosen theme is in sync with the Covid pandemic. It focuses on creating equal opportunities for everyone and addressing the failures and disappointments we all were exposed to due to Covid -19.The agenda is to use the day as an opportunity to reaffirm the importance of human rights so as to be able to rebuild the world that we seek, for achieving global solidarity, thus advocating shared humanity across communities.

The UN website lists the measures that should be kept in mind while bridging the gaps in human right protection which have been exposed and further fuelled by the Covid-19 pandemic. These include: ending discrimination of any kind, addressing inequalities, encouraging participation and solidarity and promoting sustainable development.The aim of this day is to engage the public and the partners of Human Rights as well as the UN family to take transformative action and showcase inspirational practical examples that could contribute in making resilient societies that can recover in a better way.Human Rights must be at the centre of the post COVID-19 world

The COVID-19 crisis has been fuelled by deepening poverty, rising inequalities, structural and entrenched discrimination and other gaps in human rights protection. Only measures to close these gaps and advance human rights can ensure we fully recover and build back a world that is better, more resilient, just, and sustainable.

**End discrimination of any kind:**

Structural discrimination and racism have fuelled the COVID-19 crisis. Equality and non-discrimination are core requirements for a post-COVID world.

**Address inequalities:**

To recover from the crisis, we must also address the inequality pandemic. For that, we need to promote and protect economic, social, and cultural rights. We need a new social contract for a new era.

**Encourage participation and solidarity:**

We are all in this together. From individuals to governments, from civil society and grass-roots communities to the private sector, everyone has a role in building a post-COVID world that is better for present and future generations. We need to ensure the voices of the most affected and vulnerable inform the recovery efforts.

**Promote sustainable development:**

We need sustainable development for people and planet. Human rights, the 2030 Agenda and the Paris Agreement are the cornerstone of a recovery that leaves no one behind.

10 December is an opportunity to reaffirm the importance of Human rights in re-building the world we want, the need for global solidarity as well as our interconnectedness and shared humanity.



**Salma Banu A**
B.Ed Student Teachers